# ವಿಶ್ವ ದರ್ಶನ

ಡಾ. ವಿಜಯ ಸಂಕೇಶ್ವರ ಮೀಡಿಯಾ ಸ್ಕೂಲ್ ಪ್ರಾಯೋಗಿಕ ಪತ್ರಿಕೆ

06-12-2025 | ಶನಿವಾರ ಸಂಪುಟ-3 ಸಂಚಿಕೆ-7 ಪುಟಗಳು-4


## ನುಡಿಮುತ್ತು

ಜೀವನವೆಂಬುದು ಕಠಿಣ ಸತ್ಯ. ಧೈರ್ಯವಾಗಿ ಅದನ್ನು ಎದುರಿಸಿ. ನಿಮ್ಮ ಮಾರ್ಗದಲ್ಲಿ ಮುಂದುವರೆಯಿರಿ. ಅದು ಅಭೇದ್ಯವಾಗಿರಬಹುದು. ಆದರೆ ಆತ್ಮ ಅದಕ್ಕಿಂತ ಬಲಯುತವಾದುದು.

– ಸ್ವಾಮಿ ವಿವೇಕಾನಂದ



ಯಾವಾಗಲೂ ಒಂದು ವೃಕ್ಷ ಅದರ ಬೀಜ ಮೂಲವನ್ನು ಮರೆಯಲು ಸಾಧ್ಯವಿಲ್ಲ. ಇಂದು ವಿಶ್ವದರ್ಶನ ಸುಂದರ ಹೆಮ್ಮರವಾಗಿ ಬೆಳೆದ ಹೆಚ್ಚುಗಾರಿಕೆ ನಮ್ಮಲ್ಲಿ ಇದೆ. ವಿಶ್ವದರ್ಶನ ಸಣ್ಣ ಸಂಸ್ಥೆಯಾಗಿ ಹುಟ್ಟಿ ಬೆಳೆದಿದ್ದು ಸಂಕಲ್ಪ ಶಕ್ತಿಯಿಂದ. ಕಳೆದ ಐದು ವರ್ಷಗಳ ಪಯಣದಲ್ಲಿ ಹೊಸ ಹೊಸ ಯೋಜನೆ, ಕಾರ್ಯಗಳು ಸಫಲವಾಗಿ ಮುಂದುವರೆಯುತ್ತಲೇ ಇದೆ. ಪರಿಶ್ರಮವಿದ್ದರೆ ಯಶಸ್ಸು ಖಂಡಿತ ಎಂಬುದಕ್ಕೆ ನಮ್ಮ ವಿಶ್ವದರ್ಶನದ ಇಡಗುಂದಿ ಪ್ರೌಢಶಾಲೆ ನಿದರ್ಶನವಾಗಿದೆ. ಸಿ ಬಿ ಎಸ್ ಇ ಪ್ರಾರಂಭವಾಗುವಾಗ ಅನೇಕ ಸವಾಲುಗಳಿದ್ದವು.ನಮ್ಮ ಪರಿಶ್ರಮದಿಂದ ಅವುಗಳನ್ನು ದಾಟಿ ರಾಜ್ಯಕ್ಕೆ ತಿಪ್ರಥಮ ಸ್ಥಾನ, ದೇಶಕ್ಕೆ ಮೂರನೆ ಸ್ಥಾನ ಪಡೆದಿದ್ದೇವೆ. ಸಾಕಷ್ಟು ವೃತ್ತಿಪರ ಕೋರ್ಸುಗಳಿಗೆ ಅವಕಾಶ ಕಲ್ಪಿಸಿ ನಮ್ಮ ಶಿಕ್ಷಣ ಸಮೂಹ ಮಕ್ಕಳ ಭವಿಷ್ಯಕ್ಕೆ ಭದ್ರ ಬುನಾದಿಯಾಗಿದೆ. ಇದರ ಸದುಪಯೋಗವನ್ನು ಪ್ರತಿಯೊಬ್ಬರೂ ಪಡೆದುಕೊಳ್ಳಬೇಕು ಎಂದರು.

❍ ಹರಿಪ್ರಕಾಶ ಕೋಣೆಮನೆ ಅಧ್ಯಕ್ಷ ವಿಶ್ವದರ್ಶನ ಶಿಕ್ಷಣ ಸಮೂಹದ

ಹಸಿರ ದೇಗುಲದ ಒಡಲಲ್ಲಿ ಸಂಭ್ರಮದ ಹೂನಗು, ಶೈಕ್ಷಣಿಕ ತಾಣದಲ್ಲಿ ರಂಗಿನ ಕಾರ್ಯಕ್ರಮಗಳ ಸೊಬಗು. ತರಗತಿಯ ಕೋಣೆಯ ಹೊರಗೆ ಚಿಮ್ಮಿದ ಹಲವು ಮಕ್ಕಳ ಹರುಷ, ಇದು ವಿಶ್ವದರ್ಶನ ಶಿಕ್ಷಣ ಸಮೂಹದ ವಾರ್ಷಿಕ 'ಸಂಭ್ರಮ' ದಿವಸ

### ಭಗವದ್ಗೀತೆಯ ಮೌಲ್ಯಗಳು ಶಿಕ್ಷಣಕ್ಕೆ ಮಾರ್ಗದರ್ಶಿ ಆದರ್ಶ ಗೋಖಲೆ ಅಭಿಮತ

# ಗುಣಮಟ್ಟದ ಶಿಕ್ಷಣಕ್ಕೆ ಮಾದರಿ ವಿಶ್ವದರ್ಶನ




ವಿಶ್ವದರ್ಶನ ಸಂಭ್ರಮದಲ್ಲಿ ವಿದ್ಯಾರ್ಥಿಗಳಿಗೆ ಮೌಲ್ಯಾಧಾರಿತ ಶಿಕ್ಷಣದ ಮಹತ್ವ ಕುರಿತು ಮಾತನಾಡಿದ ಆದರ್ಶ ಗೋಖಲೆ.

ಯಲ್ಲಾಪುರ : ಅಂಕಗಳಿಕೆಯ ಶಿಕ್ಷಣ ಎಂದಿಗೂ ಸಂಬಂಧಗಳ ಮೌಲ್ಯ ಮತ್ತು ಸಂಸ್ಕಾರವನ್ನು ಕೊಡಲು ಸಾಧ್ಯವಿಲ್ಲ. ಯಾವ ಶಿಕ್ಷಣ ನಮ್ಮ ಭಾರತೀಯ ಸಂಸ್ಕೃತಿ ಮೌಲ್ಯಗಳನ್ನು ಕಲಿಸುವುದಿಲ್ಲವೋ ಅಂತಹ ಶಿಕ್ಷಣಕ್ಕೆ ಅರ್ಥ ಇಲ್ಲ ಎಂದು ಖ್ಯಾತ ಉಪನ್ಯಾಸಕ ಮತ್ತು ಶಿಕ್ಷಣ ತಜ್ಞ ಆದರ್ಶ ಗೋಖಲೆ ಹೇಳಿದರು.

ಅವರು ಪಟ್ಟಣದ ವಿಶ್ವದರ್ಶನ ಶಿಕ್ಷಣ ಸಮೂಹದ ಆವರಣದಲ್ಲಿ ನಡೆದ ವಿಶ್ವದರ್ಶನ ಸಂಭ್ರಮದಲ್ಲಿ ಮಾತನಾಡಿದ. ಇಂದು ವಿಶ್ವದರ್ಶನ ಮೌಲ್ಯ ಸಂಸ್ಕೃತಿಯೊಟ್ಟಿಗೆ ಸಮಾಜಮುಖಿಯಾಗಿ ಕೆಲಸ ಮಾಡುತ್ತಿದೆ. ಇಂದು ದೇಶಕ್ಕೆ ಬೇಕಾಗಿರುವುದು ಇಂತಹ ಮಾನದಂಡ. ಶಿಕ್ಷಣದ ಮುಖ್ಯ ಉದ್ದೇಶ ವಿದ್ಯಾರ್ಥಿಗಳಿಂದ ಪ್ರತಿಭೆಯನ್ನು ಹೊರ ತೆಗೆಯುವುದು. ಯಾವ ಮಗುವಿನ ಕನಸು ಕೂಡ ಸಣ್ಣದಲ್ಲ. ಆ ಕನಸಿಗೆ ನೀರೆರೆದು ಬೆಳೆಸುವ ವಾತಾವರಣ ನಮಗಿಂದು ಬೇಕು. ಕನಸಿನ ಸಾಧನೆಗೆ ವಯಸ್ಸಿನ ಹಂಗಿಲ್ಲ ಎನ್ನುವುದಕ್ಕೆ ಡಾ.ಅಬ್ದುಲ್ ಕಲಾಮ್ ಅವರು ಒಂದು ಉತ್ತಮ ನಿದರ್ಶನ.

ವಿಜ್ಞಾನ ಕ್ಷೇತ್ರದಲ್ಲಿ ಆಲ್ಬರ್ಟ್ ಐನ್ಸ್ವೀನ್ ಅವರ ಕೊಡುಗೆಯ ಹಿಂದೆ ಭಾರತದ ಭಗವದ್ಗೀತೆ ಇದೆ. ಇಂದು ವಿಶ್ವದರ್ಶನ ಅಂತಹ ಭಗವದ್ಗೀತೆಯನ್ನು ಕಲಿಸುತ್ತಿದೆ ಎಂದರೆ ಇಲ್ಲಿನ ಪ್ರತಿ ಮಗುವನ್ನು ವಿಶ್ವಮಾನವನನ್ನಾಗಿ ಮಾಡಲು ಅಣಿಯಾಗುತ್ತಿದೆ ಎಂದರ್ಥ. ಒಂದು ಸಣ್ಣ ಯೋಚನೆ ಸಾಧನೆಗೆ ದಾರಿಯಾಗಬಲ್ಲದು.ಇಂದು ಮಕ್ಕಳಲ್ಲಿ ಸಾಮರ್ಥ್ಯ ಇದೆ ಆದರೆ ಅದನ್ನು ಗುರುತಿಸುವ ಕೆಲಸ ಆಗಬೇಕಿದೆ ಎಂದು ನುಡಿದರು.

ಇಂದು ಮೊಬೈಲ್ ಮಕ್ಕಳ ಹಾದಿ ತಪ್ಪಿಸುತ್ತದೆ ಮೊಬೈಲ್ ಹುಚ್ಚಿನಿಂದ ಅನೇಕರು ತಮ್ಮ ಬದುಕನ್ನು ಸಂಕಷ್ಟಕ್ಕೆ ತಂದುಕೊಳ್ಳುತ್ತಿದ್ದಾರೆ. ಸ್ಫೂರ್ತಿಗಳನ್ನು ಹರಸಿ ಎಲ್ಲೆಲ್ಲೋ ಹೋಗುವ ಬದಲು ನಮ್ಮ ಇತಿಹಾಸದ ಅನೇಕ ಮಹನೀಯರ ಕುರಿತು ಅರಿತುಕೊಳ್ಳಬೇಕು ಎಂದು ಅಭಿಪ್ರಾಯ ಪಟ್ಟರು.

ಇಮ್ಯಾಕುಲೆಟ್ ಓರಾಕಲ್ ನ ಮುಖ್ಯಸ್ಥ ಅರೋಗ್ಯಸ್ವಾಮಿ ಮಾತನಾಡಿ, ಈ ಸಂಸ್ಥೆಯು ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಉತ್ತಮ ಸಂಸ್ಕಾರಯುತ ಮನುಷ್ಯನನ್ನಾಗಿ ಮಾಡಿ ಸಮಾಜಕ್ಕೆ ಧಾರೆಯಾಗಿ ನೀಡುತ್ತಿದೆ. ಇಂದು ಎಷ್ಟೋ ಜನ ವಿದೇಶಕ್ಕೆ ಹೋಗುವ ಕನಸು ಕಂಡರೆ, ಇಲ್ಲಿಯ ವಿದ್ಯಾರ್ಥಿಗಳಿಗೆ ಇಲ್ಲಿಯ ಮೂಲ ಸಂಸ್ಕೃತಿಯ ಕುರಿತು ಪ್ರೀತಿ ಮತ್ತು ಗೌರವವಿದೆ. ನಮ್ಮಲ್ಲಿನ ಅತೀ ಉತ್ತಮ ಶಿಕ್ಷಕರು ಜೆಇಇ, ನೀಟ್, ಕಲಿಸಲು ಇಲ್ಲಿಗೆ ಬರುತ್ತಿರುವುದು ಖಂಡಿತ ಅರ್ಥಪೂರ್ಣ. ಈ ಸಂಸ್ಥೆ ಎಂದಿಗೂ ಸೋಲುವುದಿಲ್ಲ ಎಂಬ ಭರವಸೆ ನನಗಿದೆ. ಹಣ ಗಳಿಸಲು ಹವಣಿಸುವ ಸಂಸ್ಥೆಗಳ ನಡುವೆ ಇದು ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಕಾಳಜಿ ವಹಿಸುತ್ತಿರುವುದು ಹೆಮ್ಮೆಯ ವಿಚಾರ ಎಂದು ನುಡಿದರು.

ರಾಮನಾಥ ಭಟ್ಟ ಅಡಿಕೆ ಪಾಲ್ ಮಾತನಾಡಿದ ಜೀವನದಲ್ಲಿ ಒಬ್ಬ ವ್ಯಕ್ತಿ 100 ವರ್ಷ ಬದುಕಿದ್ದರೆ 25 ವರ್ಷ ಬಾಲ್ಯದಿಂದ ಇನ್ನೊಂದು 25 ವರ್ಷ ಸ್ನೇಹಿತರು,ಮುಂದಿನದು ಗುರುಹಿರಿಯರು,ಉಳಿದ 25% ಜೀವನ ಕ್ರಮದಿಂದ ಬರುತ್ತದೆ. ಪ್ರಯತ್ನದ ಹಿಂದೆ ಬಿದ್ದು ಮಹಾತ್ವಾಕಾಂಕ್ಷೆಯಿಂದ ಹೊರಟಾಗ ಒಂದು ಕೆಲಸವನ್ನು ಅಚ್ಚುಕಟ್ಟಾಗಿ ನಿಭಾಯಿಸಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮೇಜರ್ ಗಣಪತಿ ಹೆಗಡೆ, ಸತೀಶ ಯಲ್ಲಾಪುರ, ಡಾ.ವೆಂಕಟ್ರಮಣ ಭಟ್ಟ, ರಾಧಾಕೃಷ್ಣ ನಾಯ್ಕ, ನಾರಾಯಣ ಹೆಗಡೆ ಗವೆಗುಳಿ, ಗುರು ಭಟ್ಟ ಮಂಚಿಕೇರಿ ಇವರಿಗೆ ಗೌರವ ಸಮ್ಮಾನ ಮಾಡಲಾಯಿತು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳ ಕೈ ಬರಹ ಪತ್ರಿಕೆ ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ವಿಶ್ವ ದರ್ಶನ ಶಿಕ್ಷಣ ಸಮೂಹದ ಉಪಾಧ್ಯಕ್ಷ ಶ್ರೀನಿವಾಸ್ ಹೆಬ್ಬಾರ್, ನಿರ್ದೇಶಕ ಗಣಪತಿ ಮಾನಿಗದ್ದೆ, ಅಡಿಕೆ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ರವಿ ಹೆಗಡೆ, ಕೃಷಿಕ ಬಸವರಾಜ ನಡುವಿನಮನಿ, ವನವಾಸಿ ಕಲ್ಯಾಣದ ದೋಂಡು ಪಾಟೀಲ್, ಸಾಮಾಜಿಕ ಮುಖಂಡ ನಟರಾಜ್ ಗೌಡರ್ ಉಮ್ಮಚಗಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಹರ್ಷ ಭಾನು, ವ್ಯಾಪಾರಸ್ಥ ರವಿ ಬದ್ದಿ, ರೈತ ಹೋರಾಟಗಾರ ಮಹೇಶ್ ಹೊಸಕೊಪ್ಪ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

## ವಿಶ್ವದರ್ಶನ ಸಂಭ್ರಮ ಮಹೋತ್ಸವಕ್ಕೆ ಅದ್ದೂರಿ ಚಾಲನೆ



ವಿಶ್ವದರ್ಶನ ಸಂಭ್ರಮದ ಉದ್ಘಾಟನಾ ವೇದಿಕೆಯಲ್ಲಿ ಗಣ್ಯರು ಸಂಪ್ರದಾಯಬದ್ಧ ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು ಶಂಕರ್ ಭಟ್ ತಾರೀಮಕ್ಕಿ, ಪಿಜಿ ಭಟ್ ವಡ್ರಮನೆ, ವಿಘ್ನೇಶ್ವರ ಗಾಂವ್ಕರ್, ವಿಶ್ವದ ಮಾದೇವಿ ಭಟ್,ಉಪಸ್ಥಿತರಿದ್ದರು. .

ಯಲ್ಲಾಪುರ: ಒಂದು ಸಂಸ್ಥೆಯನ್ನು ಹುಟ್ಟುಹಾಕುವುದು ಮುಖ್ಯವಲ್ಲ ಆ ಸಂಸ್ಥೆಯನ್ನು ಯಾವ ರೀತಿಯಲ್ಲಿ ಬೆಳೆಸುತ್ತೇವೆ ಅನ್ನುವುದು ಮುಖ್ಯವಾಗುತ್ತದೆ. ಸಾಕಷ್ಟು ಸವಾಲುಗಳನ್ನು ಎದುರಿಸಿಯೂ ಸಹ ವಿದ್ಯಾರ್ಥಿಗಳ ಉತ್ತಮ ಭವಿಷ್ಯ ರೂಪಿಸುವಂತಹ ಶಿಕ್ಷಣವನ್ನು ವಿಶ್ವದರ್ಶನ ಶಿಕ್ಷಣ ಸಮೂಹ ನೀಡುತ್ತಿದೆ ಎಂದು ಶಾಸಕ ಶಿವರಾಮ ಹೆಬ್ಬಾರ ಹೇಳಿದರು.

ಪಟ್ಟಣದ ವಿಶ್ವದರ್ಶನ ಶಿಕ್ಷಣ ಸಮೂಹದ ಆವರಣದಲ್ಲಿ ಆಯೋಜಿಸಿದ್ದ ವಿಶ್ವದರ್ಶನ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದ.

ಶಿಕ್ಷಣವನ್ನು ದುಡ್ಡು ಕೊಟ್ಟು ತರಬಹುದು. ಆದರೆ ಸಮಾಜಕ್ಕೆ ಬೇಕಾದಂತಹ ಉತ್ತಮ ಸಂಸ್ಕಾರವಿರುವ ವಿದ್ಯಾರ್ಥಿಗಳನ್ನು ಒಬ್ಬ ಶಿಕ್ಷಕ ಮಾತ್ರ ತಯಾರು ಮಾಡುವುದಕ್ಕೆ ಸಾಧ್ಯ. ಮೌಲ್ಯ, ಸಂಸ್ಕಾರದ ಜತೆ ಹೊರ ಜಗತ್ತಿನ ಸ್ಪರ್ಧೆಗೆ ಬೇಕಾಗುವಂತಹ ಗುಣಗಳನ್ನು ವಿಶ್ವದರ್ಶನ ಸಂಸ್ಥೆ ಬೆಳೆಸುತ್ತಿರುವುದು ಶ್ಲಾಘನೀಯ ಎಂದು ಅವರು ಹೇಳಿದರು.

ಮಾತೃ ಭಾಷೆಗೆ ಸಮನಾದುದು ಯಾವುದೂ ಇಲ್ಲ. ಆದರೆ ಹೊರ ಜಗತ್ತಿನಲ್ಲಿ ಸ್ಪರ್ಧಿಸಬೇಕಾದರೆ ಇಂಗ್ಲಿಷ್ ಭಾಷೆ ಅನಿವಾರ್ಯ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಉದ್ಯಮಿ ನಿತ್ಯಾನಂದ ಗಾಂವ್ಕರ್, ಮಾಲತೇಶ ಎಂಟ್ರಪ್ರೈಸಸ್ ಮಾಲೀಕ ಮಹೇಶ್ ಗೌಳಿ, ಹಿರಿಯ ಪತ್ರಕರ್ತ ಶಂಕರ್ ಭಟ್ ತಾರೀಮಕ್ಕಿ, ಪಿಜಿ ಭಟ್ ವಡ್ರಮನೆ, ಸಿಎ ವಿಘ್ನೇಶ್ವರ ಗಾಂವ್ಕರ್, ವಿಶ್ವದರ್ಶನ ಸಿ ಬಿ ಎಸ್ ಸಿ ಮುಖ್ಯೋದ್ಯಾಪಕಿ ಮಾದೇವಿ ಭಟ್, ಪಾಲಕರು, ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ವಿಶ್ವದರ್ಶನ ವಾರ್ಷಿಕ ಸ್ಪರ್ಧೆಗಳ ಪ್ರಶಸ್ತಿಗಳನ್ನು ಪ್ರಧಾನಿಸಲಾಯಿತು.

ಮಹಾದೇವಿ ಭಟ್ ಸ್ವಾಗತಿಸಿದರು. ಆಸ್ಮಾ ಶೇಕ್ ನಿರೂಪಿಸಿದರು. ಸಂಕರ್ಷಣ ಭಟ್ ವಾರ್ಷಿಕ ವರದಿ ವಾಚಿಸಿದರು.




"ಅಂಕಗಳಿಂದ ವಿದ್ಯಾರ್ಥಿಗಳ ಕೌಶಲ್ಯವನ್ನು ಅಳೆಯದೆ, ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಯಲ್ಲಿ ಅವರ ಭಾಗವಹಿಸುವಿಕೆಯ ಮೂಲಕ ಅವರ ಸಾಮರ್ಥ್ಯವನ್ನು ಅಳೆಯಬೇಕು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಬೌದ್ಧಿಕ ಬೆಳವಣಿಗೆಗಾಗಿ ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು.

❍ ಪ್ರಮೋದ್ ಹೆಗೆಡೆ, ಅಧ್ಯಕ್ಷ ಸಂಕಲ್ಪ ಸೇವಾ ಸಂಸ್ಥೆ



"ಮಂತ್ರಕ್ಕೆ ಉಪಯೋಗಕ್ಕೆ ಬಾರದೆ ಇರುವ ಯಾವುದೇ ಅಕ್ಷರಗಳಿಲ್ಲ. ಔಷಧಿಗೆ ಬಾರದ ವೃಕ್ಷಗಳು ಯಾವುದೂ ಇಲ್ಲ, ಹಾಗೆಯೇ ಯಾವ ಮಕ್ಕಳು ಕೂಡ ಅಪ್ರಯೋಜಕರಲ್ಲ. ಇಂತಹ ಧ್ಯೇಯದೊಂದಿಗೆ ವಿಶ್ವದರ್ಶನ ಇಂದು ಮಕ್ಕಳಲ್ಲಿ ಉತ್ತಮ ಸಂಸ್ಕಾರ ಮತ್ತು ಮೌಲ್ಯವನ್ನು ವಿದ್ಯಾರ್ಥಿಗಳಲ್ಲಿ ತುಂಬುತ್ತಿದೆ.

❍ ರಾಜಶೇಖರ್ ವಂದಲ್ಲಿ, ಪೊಲೀಸ್ ಉಪನಿರೀಕ್ಷಕ



"ಅಂಕಗಳಿಕೆಯ ಶಿಕ್ಷಣ ಎಂದಿಗೂ ಸಂಬಂಧಗಳ ಮೌಲ್ಯ ಮತ್ತು ಸಂಸ್ಕಾರವನ್ನು ಕೊಡಲು ಸಾಧ್ಯವಿಲ್ಲ. ಯಾವ ಶಿಕ್ಷಣ ನಮ್ಮ ಭಾರತೀಯ ಸಂಸ್ಕೃತಿ ಮೌಲ್ಯಗಳನ್ನು ಕಲಿಸುವುದಿಲ್ಲವೋ ಅಂತಹ ಶಿಕ್ಷಣಕ್ಕೆ ಅರ್ಥ ಇಲ್ಲ. ಇಂತಹ ಮಾನದಂಡದದ ಅಡಿಯಲ್ಲಿ ವಿಶ್ವದರ್ಶನ ಪಠ್ಯಗಳ ಜೊತೆಗೆ ಸಂಸ್ಕೃತಿ ಸಂಸ್ಕಾರವನ್ನು ನೀಡಿ ಮಗುವನ್ನು ವಿಶ್ವಮಾನವನನ್ನಾಗಿ ಮಾಡುತ್ತಿದೆ.

❍ ವೆಂಕಟ್ರಮಣ ಬೆಳ್ಳಿ ಸಾಮಾಜಿಕ ಕಾರ್ಯಕರ್ತ



## ಸಾಂಸ್ಕೃತಿಕ ಹೊಂಬೆಳಕು ಚೆಲ್ಲಿದ ಚಕ್ರಗ್ರಹಣ




ವಿಶ್ವದರ್ಶನದ 2025ರ ಸಂಭ್ರಮೋತ್ಸವದಲ್ಲಿ "ಚಕ್ರಗ್ರಹಣ" ತಾಳಮದ್ದಳೆ ಪ್ರದರ್ಶನ ವಿಶೇಷ ಆಕರ್ಷಣೆಯಾಗಿ ಮೂಡಿಬಂದಿತು. ನಾಡಿನ ಶ್ರೇಷ್ಠ ಕಲಾವಿದರಾದ ಶ್ರೀ ಅನಂತ ದಂತಳಿಗೆ (ಮೃದಂಗ), ಶ್ರೀ ನರಸಿಂಹ ಭಟ್ಟ ಹಂಡ್ರಮನೆ ಮತ್ತು ಶ್ರೀ ಪ್ರಮೋದ್ ಕಬ್ಬಿನಗಡ್ಡೆ (ಚಂಡೆ) ತಮ್ಮ ಸೊಗಸಿನ ನಾದಸಾಮರಸ್ಯದಿಂದ ಪ್ರೇಕ್ಷಕರ ಮನಸ್ಸು ಸೆಳೆದರು. ಮುಮ್ಮೇಳದಲ್ಲಿ ಭೀಷ್ಮನಾಗಿ ವಿದ್ಯಾವಾಚಸ್ಪತಿ ಉಮಾಕಾಂತ ಭಟ್ಟ, ಶ್ರೀಕೃಷ್ಣನಾಗಿ ಎಂ. ಎನ್. ಹೆಗಡೆ ಮತ್ತು ಅರ್ಜುನನಾಗಿ ಡಾ. ಮಹೇಶ್ ಭಟ್ಟ ನೀಡಿದ ಸಂಭಾಷಣೆ ಕಾರ್ಯಕ್ರಮಕ್ಕೆ ಕಲಾತ್ಮಕ ಘನತೆ ಮತ್ತು ವೈಶಿಷ್ಟ್ಯತೆಯನ್ನು ಸೇರಿಸಿತು. ತಾಳಮದ್ದಳೆಯ ನಾದ–ನಾಟಕಸಂಗಮ ಪ್ರೇಕ್ಷಕರ ಮೇಲೆ ದೀರ್ಘಕಾಲದ ಪ್ರಭಾವ ಬೀರಿತು.

ವಿಶ್ವ ದರ್ಶನ
ಡಾ. ವಿಜಯ ಸಂಕೇಶ್ವರ ಮೀಡಿಯಾ ಸ್ಕೂಲ್ ಪ್ರಾಯೋಗಿಕ ಪತ್ರಿಕೆ
06-12-2025 | ಶನಿವಾರ
ಸಂಪುಟ-3 ಸಂಚಿಕೆ- 7 ಪುಟಗಳು-4


# ನಾವು ನಿತ್ಯ ಯೋಗ ಮಾಡಿ ನಿರೋಗಿಗಳಾಗಿ ಬದುಕಿದರೆ ಅದು ನಿಜವಾದ ರಾಷ್ಟ್ರ ಸೇವೆ




**ಅಂತರಾಷ್ಟ್ರೀಯ ಯೋಗ ಗುರು ಹಾಗೂ ಪತಂಜಲಿ ಯೋಗ ಪೀಠದ ರಾಜ್ಯ ಪ್ರಭಾರಿ ಭವರಲಾಲ್ ಆರ್ಯ ವಿಶ್ವದರ್ಶನ ಸಂಭ್ರಮದಲಿ ಮಾತನಾಡಿದ ಸಂದರ್ಭ.**

ಯಲ್ಲಾಪುರ: ಯೋಗದಿಂದ ದೇಶಕ್ಕೆ ಗೌರವ ಬಂದಿದೆ. ಸನಾತನವನ್ನು ನಂಬಿದವರಿಗೆ ಇದು ಪರ್ವಕಾಲ. ಯೋಗ ಕಾಲ ಎಂದು ಅಂತರಾಷ್ಟ್ರೀಯ ಯೋಗ ಗುರು ಹಾಗೂ ಪತಂಜಲಿ ಯೋಗ ಪೀಠದ ರಾಜ್ಯ ಪ್ರಭಾರಿ ಭವರಲಾಲ್ ಆರ್ಯ ಹೇಳಿದರು.

ಅವರು ಪಟ್ಟಣದ ವಿಶ್ವದರ್ಶನ ಶಿಕ್ಷಣ ಸಮೂಹದ ಆವರಣದಲ್ಲಿ ನಡೆದ ವಿಶ್ವದರ್ಶನ ಸಂಭ್ರಮ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದರು.

ಯೋಗದ ಅರ್ಥವೇ ಜೋಡಣೆ. ಪ್ರತಿಯೊಬ್ಬರ ಜೀವನದಲ್ಲೂ ಮಾಡುವ ಕಾಯಕ ಶ್ರೇಷ್ಠವಾಗಿ ಆಗಬೇಕು. ಒಬ್ಬ ವಿದ್ಯಾರ್ಥಿ ಆದರ್ಶ ವಿದ್ಯಾರ್ಥಿಯಾಗಬೇಕಾದರೆ ಯೋಗ ಮಾಡಬೇಕು. ಒಬ್ಬ ಕಾರ್ಮಿಕ, ಒಬ್ಬ ವೈದ್ಯ ತಮ್ಮ ವೃತ್ತಿಯಲ್ಲಿ ಅದರ್ಶರಾಗಬೇಕದರೆ ಯೋಗ ಮಾಡುವುದು ಅಗತ್ಯವಾಗಿದೆ. ಅಧ್ಯಯನ ಮತ್ತು ಅಭ್ಯಾಸ ಸರಿಯಾಗಿ ಮಾಡಿದಾಗ ಅದು ನಮ್ಮ ಆಚರಣೆಯಲ್ಲಿ ಬರುತ್ತದೆ. ಪಾಲಕರಲ್ಲಿ ಹಣ, ಸಂಪತ್ತು ಇದ್ದರೆ ಸಾಲದು. ತಮ್ಮ ಮಕ್ಕಳಿಗೆ ಸಂಸ್ಕಾರ ತಿಳಿಸುವುದು ಅಗತ್ಯ. ಶಿಕ್ಷಣ ಸಂಸ್ಥೆಗಳ ಜೊತೆಗೆ ಪಾಲಕರ ಜವಾಬ್ದಾರಿಯೂ ಮುಖ್ಯ. ಮಕ್ಕಳಿಗೆ ಹೆಚ್ಚಿನ ಸಮಯ ನೀಡದಿದ್ದರೆ ಅವರು ಸಮಾಜದಲ್ಲಿ ಉತ್ತಮ ನಾಗರಿಕರಾಗಲು ಸಾಧ್ಯವಿಲ್ಲ. ಯಲ್ಲಾಪುರ ತಾಲೂಕನ್ನು, ರಾಜ್ಯವನ್ನು ಯೋಗ ಯುಕ್ತ ರೋಗ ಮುಕ್ತ ಮಾಡಬೇಕಿದೆ. ನಾವೆಲ್ಲರೂ ಸ್ವದೇಶಿ ಚಿಮತನೆ ಮಾಡುವ ಸಂಕಲ್ಪ ಮಾಡಬೇಕು. ಅದರಿಂದ ರಾಷ್ಟ್ರದ ಏಳಿಗೆ ಸಾದ್ಯ ಎಂದರು.

ಸಂಸ್ಥೆಯ ಅಧ್ಯಕ್ಷ ಹರಿಪ್ರಕಾಶ ಕೋಣೆಮನೆ ಮಾತನಾಡಿ, ಯಲ್ಲಾಪುರದ ಪ್ರತಿಭೆ ಸಂಸ್ಕೃತಿ ಸಂಸ್ಕಾರ ಇಡೀ ವಿಶ್ವಕ್ಕೆ ಪರಿಚಿತವಾಗಬೇಕು ಎಂಬುದು ವಿಶ್ವದರ್ಶನದ ಧ್ಯೇಯ. ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಸಂಸ್ಕಾರಯುತ ಶಿಕ್ಷಣವನ್ನು ಸಂಸ್ಥೆ ನೀಡುತ್ತಿದೆ. ಕಲಿಕೆಗೆ ಉದ್ದೇಶದಷ್ಟೆ ತಕ್ಕ ವೇದಿಕೆಯೂ ಮುಖ್ಯ. ಜಗತ್ತಿನಲ್ಲಿ ಇಂಗ್ಲೀಷ್ ಭಾಷೆಯನ್ನು ಆಧಾರವಾಗಿಟ್ಟುಕೊಳ್ಳದೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಸಾಕಷ್ಟಿವೆ. ಜಾಗತಿಕ ಮಟ್ಟದಲ್ಲಿ ಮಗುವೂ ಸ್ಪರ್ಧಿಸುವಂತೆ ಬೆಳೆಯಲು ಸಿಬಿಎ ಪಠ್ಯಕ್ರಮ ಅಗತ್ಯ. ಇಂದು ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಕಣ್ಣು ಮುಚ್ಚಿ ನಂಬುತ್ತಿರುವುದರಿಂದ ಭಾಷೆಗಳು ಹಾಳಾಗುತ್ತಿವೆ. ಇದಕ್ಕೆ ಅನ್ಯ ಯಾವ ಭಾಷೆಗಳೂ ಕಾರಣವಲ್ಲ. ಮಾತಿನ ಕೌಶಲ್ಯ ಬಲ್ಲವನು ಜಗತ್ತನ್ನು ಗೆಲ್ಲಬಲ್ಲ. ಉತ್ಕೃಷ್ಟವಾದ ಭಾಷಾ ಜ್ಞಾನವನ್ನು ವಿಶ್ವದರ್ಶನ ನೀಡುತ್ತಿದೆ ಎಂದು ಹೇಳಿದರು.

ಬೀದರಿನ ಉದ್ಯಮಿ ಚೆನ್ನಸಬವಣ್ಣ ಬಳತೆ ಮಾತನಾಡಿ, ಅಕ್ಷರ ಕಲಿತ ವ್ಯಕ್ತಿ ಭ್ರಷ್ಟನಾದರೂ ಆಗಬಹುದು, ಆದರೆ ಸಂಸ್ಕಾರ ಕಲಿತ ವ್ಯಕ್ತಿ ಎಂದಿಗೂ ಭ್ರಷ್ಟನಾಗಲಾರ. ಸಮಾಜ ಒಳ್ಳೆಯ ದಾರಿಯಲ್ಲಿ ಸಾಗಬೇಕಾದರೆ ಸಾಧ್ಯವಾದಷ್ಟು ಸಮಾಜಕ್ಕೆ ಕೊಡುಗೆ ನಿಡಬೇಕು. ನಮ್ಮ ಎರಡು ಕೈಗಳಲ್ಲಿ ಒಂದು ಕೈ ತನಗಾದರೆ ಇನ್ನೊಂದನ್ನು ಸಮಾಜಕ್ಕೆ ಮೀಸಲಿಡಬೇಕು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಸಂಸ್ಕೃತ ವಿದ್ವಾಮಸ ಗೋಪಾಲಕೃಷ್ಣ ಭಟ್ಟ ಹಂಡ್ರಮನೆ, ಹಿರಯ ವೈದ್ಯ ಜಿ.ಪಿ. ಭಟ್ಟ ಕಣ್ಣಿ, ಶ್ರೀನಿವಾಸ ಅಡಿಕೆಸರ, ಬಸವರಾಜ ನಡುವಿನಮನಿ, ಬೀರಣ್ಣ ನಾಯ್ಕ ಮೊಗಟಾ, ಸುಮಾ ತೊಂಡೆಕೆರೆ ಅವರಿಗೆ ಗೌರವ ಸಮ್ಮಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ವಿಶ್ವದರ್ಶನ ಶಿಕ್ಷಣ ಸಮೂಹದ ನಿರ್ದೇಶಕ ನಾರಾಯಣ ಯಾಜಿ, ವಿಘ್ನೇಶ್ವರ ಗಾಂವ್ಕರ್, ಕಳಚೆ ಸಹಕಾರಿ ಸಂಘದ ಅಧ್ಯಕ್ಷ ಉಮೇಶ ಭಾಗ್ವತ್, ಪ್ರಸಾದ ಹೆಗಡೆ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಿ.ಕೆ ಗಾಂವ್ಕರ್ ಕಾರ್ಯಕ್ರಮವನ್ನು ನಿರ್ವಹಿಸಿದರು.

## ಗಮನ ಸೆಳೆದ ವಿಶೇಷ ಮಳಿಗೆಗಳು

ವಿಶ್ವದರ್ಶನ ಸಂಭ್ರಮದಲ್ಲಿ ವಿಶೇಷ ಮಳಿಗೆಗಳು ಅನೇಕ ರೀತಿಯ ವಸ್ತುಪ್ರದರ್ಶನೆಗಾಗಿ ಸಿದ್ಧಪಡಿಸಲಾಗುತ್ತದೆ. ಇವುಗಳಲ್ಲಿ ಕೃಷಿ, ಸಂಸ್ಕೃತಿ ಚಿಂತನೆ, ಆಹಾರ, ವಿಜ್ಞಾನ, ಆರೋಗ್ಯ, ಔಷಧಿ, ಪುಸ್ತಕ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಮೇಳಗಳು ಸೇರಿದ್ದವು. ಈ ಮಳಿಗೆಗಳಲ್ಲಿ ಪ್ರದರ್ಶನವಾಗುವ ವಸ್ತುಗಳು ಆರೋಗ್ಯಪೂರ್ಣವಾಗಿದ್ದು, ಸ್ಥಳೀಯ ಹಾಗೂ ನಾಡಿನ ವಿವಿಧ ಕ್ಷೇತ್ರಗಳ ಸಾಧನೆಯನ್ನು ಅನಾವರಣಗೊಳಿಸಿದವು. ಈ ವಿಶೇಷ ಮಳಿಗೆಗಳು ಸಂಭ್ರಮವನ್ನು ಮತ್ತಷ್ಟು ಸಾಂಸ್ಕೃತಿಕವಾಗಿ ಸಮೃದ್ಧಗೊಳಿಸಿತು ಮತ್ತು ಹೊಸ ಜ್ಞಾನ ಹಾಗೂ ಅನುಭವವನ್ನು ನೀಡಿತು. ವಿಶೇಷ ಮಳಿಗೆಗಳ ಉದ್ದೇಶವು ನಿರ್ದಿಷ್ಟ ಉತ್ಪನ್ನಗಳು ಅಥವಾ ಕ್ಷೇತ್ರಗಳಿಗಳ ಬಗ್ಗೆ ವಿದ್ಯಾರ್ಥಿಗಳ ಜೊತೆಗೆ ಸ್ಥಳೀಯರಿಗೆ, ಜನರಿಗೆ ತಿಳಿಸುವುದೇ ಆಗಿತ್ತು. ಈ ವ್ಯಾಪಾರ ಮೇಳಗಳು, ಪ್ರದರ್ಶನಗಳು ಮಾರುಕಟ್ಟೆ ಅನ್ವೇಷಿಸಲು ಮತ್ತು ಉದ್ದಿಮೆಗಳನ್ನು ಪ್ರೋತ್ಸಾಹಿಸುವಲ್ಲಿ ಸಹಾಯ ಮಾಡಿತು. ವ್ಯಾಪಾರದಲ್ಲಿ ಆಧುನಿಕ ಪ್ಯಾಕೇ-ಜಿಂಗ್, ಮಾರ್ಕೆಟಿಂಗ್ ತಂತ್ರಗಳು ಮತ್ತು ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಉದ್ಯಮಿಗಳಿಗೆ ಶೈಕ್ಷಣಿಕ ಬೆಂಬಲವನ್ನು ನೀಡುತ್ತದೆ.

## ಸಂಭ್ರಮದದಲ್ಲಿ ಜನರನ್ನಾಕರ್ಷಿಸಿದ ಖಾದ್ಯದಂಗಡಿಗಳು

ಖಾದ್ಯ ಅಂಗಡಿಗಳು ಕಾರ್ಯಕ್ರಮಕ್ಕೆ ಮತ್ತು ವಿಶ್ವದರ್ಶನ 2025 ಗೆ ಹೊಸ ರೀತಿಯ ರುಚಿ ಮತ್ತು ಮನರಂಜನೆಯನ್ನು ತಂದುಕೊಟ್ಟಿವೆ. ಗೋಭಿ ಮಂಚೂರಿ, ಪಾನಿಪುರಿ, ಶೇವ್ಪುರಿ, ಗಿರ್ಮಿಟ್, ಐಸ್ಕ್ರೀಮ್ ಮೊದಲಾದ ತಿಂಡಿಗಳು ಜನರ ಮನ ಸೆಳೆದಿವೆ ಹಾಗೂ ಈ ವಿಶೇಷ ಆಹಾರ ಅಂಗಡಿಗಳು ಕಾರ್ಯಕ್ರಮದ ಮೆರಗನ್ನು ಮತ್ತಷ್ಟು ಸೊಗಸಾಗಿಸಿತು. ಈ ಖಾದ್ಯ ಅಂಗಡಿಗಳು ಭಾಗವಹಿಸಿ, ವಿವಿಧ ಬಗೆಯ ಜನಪ್ರಿಯ ಮತ್ತು ದೇಶೀಯ ಆಹಾರಗಳ ಮೂಲಕ ಜನರ ಗಮನಸೆಳೆಯಿತು. ಇವು ತುಂಬಿದ ಆಹಾರ ಅನುಭವವನ್ನು ನೀಡಿದ್ದು, ಜನರ ಆಕರ್ಷಣೆಯ ಕೇಂದ್ರವಾಗಿತ್ತು. ಈ ಮಾದರಿ ಅಂಗಡಿಗಳು ಸಾರ್ವಜನಿಕರಿಗೆ ಸ್ಥಳೀಯ ಹಾಗೂ ಅಂರಾಷ್ಟ್ರೀಯ ತರಹದ ವಿಶಿಷ್ಟ ಆಹಾರಗಳ ರುಚಿಯನ್ನು ಪರಿಚಯಿಸುವ ಕಾರ್ಯ ಮಾಡಿತು. ಇಂತಹ ಅಂಗಡಿಗಳ ಮೂಲಕ ಜನರು ರುಚಿಕರ ಆಹಾರವನ್ನು ಸವಿಯಲು ಮತ್ತು ಸಾಂಸ್ಕೃತಿಕ ಸ್ವರೂಪವನ್ನು ತಿಳಿದುಕೊಳ್ಳಲು ಅವಕಾಶವನ್ನು ಹೊಂದಿಸಿಕೊಟ್ಟಿತು.





"ವಿಶ್ವದರ್ಶನ ಎಂಬುದೇ ಜಗತ್ತು, ಬ್ರಹ್ಮ ಎಂಬುದನ್ನು ತೋರಿಸುತ್ತದೆ. ಇಂದು ವಿಶ್ವದರ್ಶನವನ್ನು ವಿವಿಧ ಕ್ಷೇತ್ರದಲ್ಲಿ ಇಲ್ಲಿನ ಮಕ್ಕಳ ಸಾಧನೆ ಮೂಲಕ ಗುರುತಿಸಲಾಗುತ್ತಿದೆ. ಅವರನ್ನು ಪ್ರೋತ್ಸಾಹಿಸಿ ಮಾರ್ಗದರ್ಶನ ನಿಡುವ ಕೆಲಸ ಇಲ್ಲಿನ ಶಿಕ್ಷಕರು ಮಾಡುತ್ತಿದ್ದಾರೆ. ತಮ್ಮ ಕೆಲಸವನ್ನು ಬೀಡದೆ ಮಾಡುವವರು ಸಾಧಕರಾಗುತ್ತಾರೆ.

ಶ್ರೀ ಗೋಪಾಲಕೃಷ್ಣ ಭಟ್ಟ ಹಂಡ್ರಮನೆ



"ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಿ.ಕೆ ಗಾಂವ್ಕರ ವಿಶ್ವದರ್ಶನ ಸಂಭ್ರಮ ಹೊಸ ಹೊಸ ಮಜಲುಗಳನ್ನು ತನ್ನಲ್ಲಿ ಅಡಕವಾಗಿಸಿಕೊಂಡು ತನ್ನ ಪರೀಧಿಯನ್ನು ವಿಸ್ತರಿಸಿಕೊಂಡಿದೆ. ಹಂತ ಹಂತವಾಗಿ ಬೆಳೆಯುತ್ತಿರುವ ಪದವಿ ಪೂರ್ವ ಕಾಲೇಜಿನ ಕುರಿತು ನಮಗೆ ಅಭಿಮಾನವಿದೆ. ಮೂರು ವರ್ಷಗಳ ಹಿಂದೆ ಶುರುವಾದ ಈ ಕಾಲೇಜು ಅನೇಕ ವಿದ್ಯಾರ್ಥಿಗಳ ಆಶ್ರಯ ತಾಣ.

ಡಿ.ಕೆ ಗಾಂವ್ಕರ
ಪ್ರಾಂಶುಪಾಲ
ಪದವಿ ಪೂರ್ವ ಕಾಲೇಜು ವಿಶ್ವದರ್ಶನ



ವಿಶ್ವದರ್ಶನ ಸಂಭ್ರಮ 2025 ನಮ್ಮೂರ ಹಬ್ಬ

## ಪ್ರೇಕ್ಷಕರ ಮನಸೆಳೆದ "ಭಕ್ತಪ್ರಹ್ಲಾದ" ನಾಟಕ

ಯಲ್ಲಾಪುರ: ಕಲಾಸೌರಭ ಮಳವಳ್ಳಿ ತಂಡದವರು ರಾಜರಾಮ್ ಗಾಂವ್ಹಾರ್ ಇವರ ನಿರ್ದೇಶನದಲ್ಲಿ ಪ್ರದರ್ಶಿಸಿದ "ಭಕ್ತಪ್ರಹ್ಲಾದ" ಎಂಬ ಪೌರಾಣಿಕ ನಾಟಕ ಪ್ರೇಕ್ಷಕರನ್ನು ಭಾವಪೂರ್ಣರನ್ನಾಗಿಸಿತು. 3 ನೇ ತರಗತಿಯ ಕುಮಾರಿ ಆಶಿಕಾ ಭಟ್ಟ ಪ್ರಹ್ಲಾದನ ಪಾತ್ರವನ್ನು ವಯಸ್ಸಿಗೂ ಮೀರಿದ ಪ್ರದರ್ಶನ ತೋರಿ, ಪ್ರೇಕ್ಷಕರನ್ನು ಮೋಡಿ ಮಾಡಿದಳು.

ರಾಜಾರಾಮ್ ಗಾಂವ್ಹಾರ್ (ಹಿರಣ್ಯಕಶ್ಯಪು), ಎಸ್.ವಿ ಭಟ್ಟ (ಹಿರಣ್ಯಾಕ್ಷ), ನಾರಾಯಣ ಭಟ್ಟ (ನಾರದ), ಪಿ.ಪಿ ಹೆಬ್ಬಾರ್ (ಇಂದ್ರ), ಅನಂತ ಪಿ ಭಟ್ಟ (ಅಗ್ನಿ ಹಾಗೂ ವಿಷ್ಣು), ಸುಬ್ರಾಯ್ ಪಿ.ಕೆ. (ನಾಗರಾಜ), ಆಶಿಕ ಎಂ ಭಟ್ಟ (ಪ್ರಹ್ಲಾದ), ಗೋದಾವರಿ ಭಟ್ಟ (ಪಂಡಿತ 1), ಅಮೃತಾ ರಾವ್ (ಪಂಡಿತ 2), ಭುವನ್ ಗಾಂವ್ಹಾರ್ (ವರಾಹಾ ಹಾಗೂ ನರಸಿಂಹ),



ಎಂ.ಜಿ ಭಟ್ಟ ಬಾರೆ (ಮಂತ್ರಿ), ಸಂತೋಷ ಭಟ್ಟ (ಬ್ರಹ್ಮ), ಪಿ.ಕೆ ಭಟ್ಟ (ಮಣಿ), ಶ್ವೇತಾ ಎಸ್ ಭಟ್ಟ (ಕಯಾದು), ಶೈಲಾ ಭಟ್ಟ (ದಿತಿ), ಸನ್ನಿಧಿ ಭಟ್ಟ (ನರ್ತಕಿ ಹಾಗೂ ಭೂದೇವಿ) ಪಾತ್ರಗಳನ್ನು ಅದ್ಭುತವಾಗಿ ಪ್ರದರ್ಶಿಸಿದರು.

ವಿ.ದತ್ತಾತ್ರೆಯ ಗಾಂಪ್ಟರ್ ಚಿಟ್ಟೆಪಾಲ (ಸಂಗೀತ), ಕಾರ್ತಿಕ್ ಭಟ್ಟ (ಹಾರ್ಮೋನಿಯಂ), ಸಮೀರ್ ಡಿ (ಕ್ಯಾಸಿಯೋ), ಪ್ರವೀಣ ಇನಾಂದಾರ್ (ಪ್ಯಾಡ್), ಅಂಬಿಕಾ ಭಟ್ಟ (ಹಿನ್ನೆಲೆ) ಸಹಕರಿಸಿದರು.

# ರಂಜಿಸಿದ ಕಾವ್ಯ ನಾದಲೋಕ




ಯಲ್ಲಾಪುರ: ವಿಶ್ವದರ್ಶನ ಸಂಭ್ರಮ ಮತ್ತು ನಮ್ಮೂರ ಹಬ್ಬದ ಸಂದರ್ಭದಲ್ಲಿ ನಾಡಿನ ಖ್ಯಾತ ಗಾಯಕ ಶಂಕರ ಶಾನಭಾಗ ಬೆಂಗಳೂರು ಇವರು ಕಾವ್ಯ ನಾದಲೋಕ ಎಂಬ ವಿಶೇಷ ಕಾರ್ಯಕ್ರಮದಲ್ಲಿ ಭಕ್ತಿಗೀತೆ, ದೇಶಭಕ್ತಿಗೀತೆ, ಭಾವಗೀತೆ, ದಾಸರ ಪದಗಳನ್ನು ಹಾಡಿ ಜನರನ್ನು ರಂಜಿಸಿದರು. ಸತೀಶ ಹೆಗ್ಗಾರ (ಹಾರ್ಮೋನಿಯಂ), ಶಿವರಾಮ ಗಾಂವ್ಕರ (ಕೀಪ್ಯಾಡ್). ಗಣೇಶ ಗುಂಡ್ಕಲ್ (ತಬಲಾ), ಸಂತೋಲಿಯ ಕುಮಟಾ (ರಿದಮ್ ಪ್ಯಾಡ್) ಸಹಕರಿಸಿದರು. ಶಿಕ್ಷಕಿ ಪುಷ್ಪ ಮಾಳಕೊಪ್ಪ ಸ್ವಾಗತಿಸಿ, ಕಲಾವಿದರನ್ನು ಪರಿಚಯಿಸಿ,ನಿರೂಪಿಸಿದರು.








# ಕನ್ನಡದ ಚಾರ್ಲಿಚಾಪ್ಲಿನ್ ಎಮ್.ಎಸ್ ಉಮೇಶ್

**ಮಗುವಿನಂತ ನಗು ಮುಖ, ವಿಭಿನ್ನ ಹಾವಭಾವ, ನಗೆಗಡಲಲ್ಲಿ ತೇಲಿಸುವ ಸಂಭಾಷಣೆಯ ಮೂಲಕ ಪ್ರಸಿದ್ಧರಾಗಿದ್ದವರು ಎಮ್.ಎಸ್ ಉಮೇಶ್. 1960ರಲ್ಲಿ ತೆರೆಕಂಡ 'ಮಕ್ಕಳ ರಾಜ್ಯ' ಮುಲಕ ಬಣ್ಣದ ಬದುಕು ಆರಂಭಿಸಿದರು. ಬಾಲ ನಟನಾಗಿ, ರಂಗಭೂಮಿ ಕಲಾವಿದನಾಗಿ ಹಾಸ್ಯ ನಟನಾಗಿ ಸುಧೀರ್ಘ ಸೇವೆ ಸಲ್ಲಿಸಿದರು.ಇಂತಹ ಅಪರೂಪದ ಕಲಾವಿದನ ಐದು ದಶಕಗಳ ಸಿನಿ ಪಯಣದಲ್ಲಿ ಹಲವು ಬಾರಿ ಏಳು-ಬೀಳು ಕಂಡರೂ ಅದನ್ನು ಬಹಿರಂಗಪಡಿಸದೆ ಕನ್ನಡ ಪ್ರೇಕ್ಷಕರನ್ನು ನಗೆಸಿದವರು. "ಅಯ್ಯಯ್ಯೋ ಇವ್ರೂ ನನ್ನ ಅಪಾರ್ಥ ಮಾಡ್ಕೊಂಬಿಟ್ರಲ್ಲ. ನಾನೇನೂ ಬೇಕೂ ಅಂತ ಹೀಗ್ ಮಾಡ್ಲಿಲ್ಲ..... ಹೇಳ್ಕೊಳ್ಳೋಣ ಅಂದ್ರೆ ನನ್ಹೆಂಡ್ತಿ ಕೂಡಾ ಊರಲ್ಲಿಲ್ವೆ.." ಹೀಗೆ ತಮ್ಮ ಅಸಾಮಾನ್ಯ ರೀತಿಯ ಸಂಭಾಷಣೆ, ಅಭಿನಯ, ಅಭಿವ್ಯಕ್ತಿಗಳಿಂದ ಕನ್ನಡ ಚಿತ್ರರಸಿಕರ ಮನವನ್ನು ಇನ್ನಿಲ್ಲದಂತೆ ರಂಜಿಸಿ ಗೆದ್ದವರು ಎಂ. ಎಸ್. ಉಮೇಶ್.**



ಉಮೇಶ್ ರವರು ಎ.ಎಲ್ ಶ್ರೀಕಂಠಯ್ಯ ಹಾಗೂ ನಂಜಮ್ಮ ರವರ ಮಗನಾಗಿ ಏಪ್ರಿಲ್ 22, 1945 ರಲ್ಲಿ ಮೈಸೂರಿನಲ್ಲಿ ಜನಿಸಿದರು. ಅವರು ಪ್ರಾಥಮಿಕ ಶಿಕ್ಷಣವನ್ನು ಮೈಸೂರಿನಲ್ಲಿ ಪೂರ್ಣಗೊಳಿಸಿದರು, ಅಲ್ಲಿ ಅವರು ರಂಗಭೂಮಿ ಮತ್ತು ರಂಗ ಪ್ರದರ್ಶನಗಳತ್ತ ಆಕರ್ಷಿತರಾದರು.

## ಮಾಸ್ತಿಯವರಿಂದ ಮೆಚ್ಚುಗೆ ಪಡೆದ ಪ್ರಹ್ಲಾದ



ಕೆ. ಹಿರಣ್ಣಯ್ಯ ಮಿತ್ರ ಮಂಡಲಿಯಲ್ಲಿ ಅ.ನ.ಕೃ. ರವರು ಬರೆದ ಜಗಜ್ಯೋತಿ ಬಸವೇಶ್ವರ ನಾಟಕದಲ್ಲಿ ಬಿಜ್ಜಳನ ಮಗನ ಪಾತ್ರ ಉಮೇಶ್ ನಟಿಸಿದರು ಇದಕ್ಕೆ ಮೊದಲೇ ಅವರು ಹಲವಾರು ನಾಟಕಗಳಲ್ಲಿ ಬಾಲನಟನ ಪಾತ್ರವಹಿಸಿದ್ದರು. ಗುಬ್ಬಿ ವೀರಣ್ಣನವರ ಕಂಪನಿಯಲ್ಲೂ ಅವರಿಗೆ ಬಾಲನಟನ ಪಾತ್ರಗಳು ದೊರಕಿದವು. ದಶಾವತಾರ ನಾಟಕದಲ್ಲಿ ಇವರ ಪ್ರಹ್ಲಾದನ ಪಾತ್ರದ ಅಭಿನಯವನ್ನು ಮೆಚ್ಚಿದ ಮಾಸ್ತಿಯವರು ಹತ್ತು ರೂಪಾಯಿ ಸಂಭಾವನೆ ನೀಡಿದ್ದರು. ಗುಬ್ಬಿ ವೀರಣ್ಣನವರು ಇವರು ಬಾಲ್ಯದಲ್ಲಿದ್ದಾಗ ರಂಗ ಶಿಕ್ಷಣ ಕೊಡುತ್ತ ಅಭಿನಯವನ್ನು ಕಲಿಸಿದ ಗುರುಗಳು. ಎಂ.ಸಿ.ಮಹಾದೇವ ಸ್ವಾಮಿಯವರ ಕನ್ನಡ ಥಿಯೇಟರ್ಸ್ ಕಂಪನಿಯಲ್ಲೂ ಉಮೇಶ್ ಬಾಲನಟನಾಗಿ ಪಾತ್ರವಹಿಸಿದ್ದರು. ಉಮೇಶರಿಗೆ ನಟನೆಯ ಜೊತೆಗೆ ಹಲವಾರು ವಾದನ ಕಲೆಗಳೂ ಕರಗತವಾಗಿದ್ದವು. ಹಿರಣ್ಣಯ್ಯನವರ ಕಂಪನಿಯಲ್ಲಿ ಪಿಯಾನೋ ವಾದಕರಾಗಿ, ಕುಂಚಕಲಾವಿದರಾಗಿ, ಎನ್. ಶ್ರೀಕಂಠ ಮೂರ್ತಿಗಳ ನಾಟಕ ಕಂಪನಿಯಲ್ಲಿ ಹಾರ್ಮೋನಿಯಂ ವಾದಕರಾಗಿ ಉಮೇಶ್ ಖ್ಯಾತಿ ಗಳಿಸಿದ್ದರು. ಇದರೊಟ್ಟಿಗೆ ಅವರು ಉತ್ತಮ ಹಾಡುಗಾರರು ಕೂಡಾ ಹೌದು.

## ನಾಲ್ಕನೇ ವಯಸ್ಸಿಗೆ ಬಣ್ಣ ಹಚ್ಚಿದ್ದ ಪ್ರತಿಭೆ

ಉಮೇಶ್ 1945ರ ಏ. 24ರಂದು ಮೈಸೂರಿನಲ್ಲಿ ಜನಿಸಿದ್ದರು. ಅವರ ತಂದೆ ಶ್ರೀಕಂಠಯ್ಯ ಕೂಡ ಕೆ. ಹಿರಣ್ಣಯ್ಯ ಮಿತ್ರ ನಾಟಕ ಮಂಡಳಿಯಲ್ಲಿ ಕಲಾವಿದರಾಗಿದ್ದರು. ತಂದೆಯ ನೆರವಿನಿಂದ ಉಮೇಶ್ ತಮ್ಮ 4ನೇ ವಯಸ್ಸಿನಲ್ಲಿಯೇ ಹಿರಣ್ಣಯ್ಯ ಅವರ ನಾಟಕದಲ್ಲಿ ಬಣ್ಣ ಹಚ್ಚಿ ಮಿಂಚಿದ್ದರು. ಬಳಿಕ ಗುಬ್ಬಿ ವೀರಣ್ಣ ನಾಟಕ ಕಂಪನಿ ಸೇರಿಕೊಂಡ ಅವರು ಕೆಲ ನಾಟಕಗಳಲ್ಲಿ ಬಾಲ ಕಲಾವಿದನಾಗಿ ಅಭಿನಯಿಸಿದರು. ನಂತರ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರು ಉಮೇಶ್ ಪ್ರತಿಭೆ ಗುರುತಿಸಿ, ಖ್ಯಾತ ನಿರ್ದೇಶಕ ಬಿ.ಆರ್. ಪಂತುಲು ಗಮನಕ್ಕೆ ತಂದು ಅವರ 'ಮಕ್ಕಳ ರಾಜ್ಯ' (1960) ಸಿನಿಮಾದಲ್ಲಿ ಅವಕಾಶ ಕೊಡಿಸಿದರು.

## ಎರಡನೇ ಚಿತ್ರಕ್ಕೆ ರಾಜ್ಯ ಪ್ರಶಸ್ತಿ

'ಮಕ್ಕಳ ರಾಜ್ಯ' ಚಿತ್ರದಲ್ಲಿ ಉಮೇಶ್ ನಟನೆ ನೋಡಿ ಮೆಚ್ಚಿಕೊಂಡಿದ್ದ ಪುಟ್ಟಣ್ಣ ಕಣಗಾಲ್ ತಮ್ಮ ನಿರ್ದೇಶನದ 'ಕಥಾ ಸಂಗಮ' ಚಿತ್ರಕ್ಕೆ ಅವಕಾಶ ನೀಡಿದರು. 'ಕಥಾ ಸಂಗಮ' ನಾಲ್ಕು ಕಥೆಗಳ ಸಿನಿಮಾ. ಅದರಲ್ಲಿ 'ಮುನಿತಾಯಿ' ಕಥೆಯಲ್ಲಿ ಉಮೇಶ್ ತಿಮ್ಮರಾಯ ಪಾತ್ರ ನಿರ್ವಹಿಸಿದ್ದರು. ಇದರಲ್ಲಿ ರಜನಿಕಾಂತ್ ಕೂಡ ಇದ್ದರು. ಇದು ಉಮೇಶ್ ನಟಿಸಿದ್ದ ಎರಡನೇ ಸಿನಿಮಾ. ಇದರಲ್ಲಿನ ನಟನೆಗೆ ಅವರು ಅತ್ಯುತ್ತಮ ಪೋಷಕ ನಟ ರಾಜ್ಯ ಪ್ರಶಸ್ತಿ ಪಡೆದಿದ್ದರು. ಉಮೇಶರು ಹಲವಾರು ಪತ್ರಿಕೆಗಳ ಅಂಕಣ ಬರಹಗಾರರೂ ಹೌದು. ಅಮ್ಮಾವರ ಆಜ್ಞೆ, ಎಲ್ಲರೂ ನಮ್ಮವರೇ ಉಮೇಶರು ರಚಿಸಿದ ನಾಟಕಗಳು. ಕಿರುತೆರೆಗೆ ಬರೆದು ನಿರ್ದೇಶಿಸಿದ್ದು ನಮ್ಮೂರಲ್ಲೊಂದು ನಾಟಕ, ಸಮಸ್ಯೆಯ ಸರಮಾಲೆ, ರಿಜಿಸ್ಟರ್ ಪೋಸ್ಟ್, ಅಂಚು-ಸಂಚು, ಗೌಡತಿ ಗೌರಮ್ಮ, ಸಂಸಾರದಲ್ಲಿ ಖಔಒಇಕ್ರಾಂತಿ, ಜೋಕ್ಸ್‌ಫಾಲ್ಸ್, ಗಲಿಬಿಲಿ ಸಂಸಾರ ಮುಂತಾದುವು.

## 'ಗೋಲ್ಮಾಲ್ ಸೀತಾಪತಿಯ' ಕಿತಾಪತಿ


ಅನಂತ್‌ನಾಗ್ ಅಭಿನಯದ 'ಗೋಲ್ಮಾಲ್' ಸರಣಿಯಲ್ಲಿ ಉಮೇಶ್ ಅವರ ಸೀತಾಪತಿ ಪಾತ್ರ ಇಂದಿಗೂ ಕನ್ನಡ ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚೊತ್ತಿದೆ. ಆ ಚಿತ್ರದಲ್ಲಿ 'ನೀವೇನೋ ಬೇಜಾರ್ ಮಾಡಿಕೊಂಡಿಲ್ಲ ತಾನೇ? "ಅಯ್ಯಯ್ಯೋ ಅಪಾರ್ಥ ಮಾಡಿಕೊಂಡು ಬಿಟ್ರಾ?', 'ಅಪಾರ್ಥ ಮಾಡ್ಕೊಬೇಡಿ' ಎಂಬ ಡೈಲಾಗ್‌ಗಳು ಇಂದಿಗೂ ಹೆಚ್ಚು ಪ್ರಸಿದ್ಧವಾಗಿವೆ. 2 ತಿಂಗಳ ಹಿಂದೆ 'ಕಮಲ್ ಶ್ರೀದೇವಿ' ಚಿತ್ರದ ಧ್ವನಿಸುರುಳಿ ಬಿಡುಗಡೆ ಸಮಾರಂಭದಲ್ಲೂ ಈ ಡೈಲಾಗ್ ಹೇಳಿ ಉಮೇಶ್ ನೆರೆದಿದ್ದವರನ್ನು ರಂಜಿಸಿದ್ದರು.





ಕಳೆದ ಅ. 10ರಂದು ಮನೆಯಲ್ಲಿ ಸ್ನಾನಕ್ಕೆ ತೆರಳುವಾಗ ಆಕಸ್ಮಿಕವಾಗಿ ಜಾರಿ ಬಿದ್ದಿದ್ದ ಉಮೇಶ್ ಅವರಿಗೆ ಬಲವಾಗಿ ಪೆಟ್ಟಾಗಿತ್ತು. ಅವರನ್ನು ಖಾಸಗಿ ಆಸ್ಪತ್ರೆ ದಾಖಲಿಸಲಾಗಿ-ತ್ತು. ವೈದ್ಯರು ಶಸ್ತ್ರಚಿಕಿತ್ಸೆಗೆ ಮುಂದಾದಾಗ ಲಿವರ್‌ನಲ್ಲಿ ಗಡ್ಡೆ ಪತ್ತೆಯಾಗಿತ್ತು. ಇದು ಲಿವರ್ ಕ್ಯಾನ್ಸರ್ ಎಂದು ವೈದ್ಯರು ಖಚಿತಪಡಿಸಿದ್ದರು. ಬಳಿಕ ಅವರನ್ನು ಕಿದ್ವಾಯಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಭಾನುವಾರ ತಿಬೆಳಗ್ಗೆ 8 ಗಂಟೆಗೆ ನಿಧನರಾಗಿದ್ದಾರೆ. ಅವರಿಗೆ ಪತ್ನಿ, ಓರ್ವ ಪುತ್ರಿ ಇದ್ದಾರೆ. ಪಾರ್ಥಿವ ಶರೀರವನ್ನು ಬೆಳಗ್ಗೆ ಅವರ ಜೆಪಿ ನಗರದ ನಿವಾಸಕ್ಕೆ ಸ್ಥಳಾಂತರಿಸಲಾಯಿತು. ಬಳಿಕ ರವೀಂದ್ರ ಕಲಾಕ್ಷೇತ್ರಕ್ಕೆ ಕರೆತಂದು ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ನಟ ಡಿಂಗ್ರಿ ನಾಗರಾಜ್, ನಟಿ ಶ್ರುತಿ, ಗಿರಿಜಾ ಲೋಕೇಶ್ ಮತ್ತು ಅನೇಕ ಸ್ಯಾಂಡಲ್‌ವುಡ್ ಕಲಾವಿದರು ಅಂತಿಮ ದರ್ಶನ ಪಡೆದರು. ಸಂಜೆ ಬನಶಂಕರಿ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು

## 300ಕ್ಕೂ ಅಧಿಕ ಸಿನಿಮಾಗಳಲ್ಲಿ ನಟನೆ



ಉಮೇಶ್ ಐದೂವರೆ ದಶಕಗಳ ಸಿನಿವೃತ್ತಿಯಲ್ಲಿ 300ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದಾರೆ. ಹಾಸ್ಯ, ಪೋಷಕ ಹೀಗೆ ಚಿತ್ರದಿಂದ ಚಿತ್ರಕ್ಕೆ ಭಿನ್ನ-ವಿಭಿನ್ನ ಪಾತ್ರಗಳಲ್ಲಿ ಅವರು ಕಾಣಿಸಿಕೊಂಡಿದ್ದರು. 'ನಾಗರಹೊಳೆ' (1977), ಭಾಗ್ಯವಂತರು (1977), ಪುಟಾಣಿ ಎಜೇಂಟ್(1979), ಅಂತ (1981), ಗುರು-ಶಿಷ್ಯರು (1981), 'ಹಾಲು-ಜೇನು' (1982) 'ಎರಡು ನಕ್ಷತ್ರಗಳು' (1983), 'ಭಕ್ತ ಪ್ರಹ್ಲಾದ' (1983), 'ಗೋಲ್ಮಾಲ್ ರಾಧಾಕೃಷ್ಣ (1990), 'ತರ್ಲೆ ನನ್ಮಗ' (1992),ಆಕಸ್ಮಿಕ(1993), ಹಗಲು ವೇಷ(2000), 'ಜಾಕಿ' (2010), 'ಡೇರ್ ಡೇವಿಲ್ ಮುಸ್ತಾಫಾ' (2023) ಸೇರಿ 350ಕ್ಕೂ ಅಧಿಕ ಚಿತ್ರಗಳಲ್ಲಿ ಅವರು ನಟಿಸಿದ್ದರು. ರಮೇಶ್ ಅರವಿಂದ ನಟನೆಯ 'ವೆಂಕಟ ಇನ್ ಸಂಕಟ' ಚಿತ್ರದಲ್ಲಿ ಉಮೇಶ್ ಅವರು 'ಗುಂಡಮ್ಮ' ಎಂಬ ಹಳೆಯ ಕಾಲದ ಅಜ್ಜಿ ಪಾತ್ರ ಮೆಚ್ಚುಗೆ ಪಡೆದಿತ್ತು.









**15 ವರ್ಷಗಳ ಹಿಂದೆ ನನಗೋಸ್ಕರಉಮೇಶ್ ಸರ್ ಕಾರಿನ ಕಥೆ ಬರೆದಿದ್ದರು. ದುಡ್ಡು ತೆಗೆದುಕೊಳ್ಳದೆ ನನಗೆ ಆ ಕಥೆ ನೀಡಿದ್ದರು. ಉಮೇಶಣ್ಣ ಇದ್ದರೆ ಸೆಟ್‌ನಲ್ಲಿ ಯಾವಾಗಲೂ ನಗು ಇರುತ್ತಿತ್ತು. ಕಲೆಯಿಂದ, ಕಲೆಗಾಗಿಯೇ ಅವರು ಬದುಕಿದ್ದರು**

**– ಸಾಧು ಕೋಕಿಲ ಹಾಸ್ಯ ನಟ**

**ತಮ್ಮ ಹಾಸ್ಯದ ಮೂಲಕ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸುತ್ತಿದ್ದ ಉಮೇಶ್ ಕನ್ನಡ ಚಿತ್ರರಂಗವನ್ನು ಶ್ರೀಮಂತಗೊಳಿಸಿದ ನಟ. ಅವರ ಅಗಲಿಕೆ ಕನ್ನಡ ಕಲಾಜಗತ್ತಿಗೆ ಬಹು ದೊಡ್ಡ ನಷ್ಟ.**

**–ಎಚ್.ಡಿ. ಕುಮಾರಸ್ವಾಮಿ ಕೇಂದ್ರ ಸಚಿವ**

# ಮಣ್ಣಿನ ಅರೋಗ್ಯವೇ ಜಾಗತಿಕ ಆರೋಗ್ಯ

**ಭೂಮಿಯ ಮೇಲಿನ ಜೀವವನ್ನು ಉಳಿಸಿಕೊಳ್ಳುವಲ್ಲಿ ಆರೋಗ್ಯಕರ ಮಣ್ಣಿನ ಪ್ರಮುಖ ಪಾತ್ರವನ್ನು ಎತ್ತಿ ತೋರಿಸಲು ಪ್ರತಿ ವರ್ಷ ಡಿಸೆಂಬರ್ 5 ರಂದು ವಿಶ್ವ ಮಣ್ಣು ದಿನವನ್ನು ಆಚ-ರಿಸಲಾಗುತ್ತದೆ . ವಿಶ್ವಸಂಸ್ಥೆಯಿಂದ ಗುರುತಿಸಲ್ಪಟ್ಟ ಈ ಮಹತ್ವದ ಅಂತರರಾಷ್ಟ್ರೀಯ ದಿನವು, ಜನರು, ವಿಶೇಶವಾಗಿ ವಿದ್ಯಾರ್ಥಿಗಳು ಮತ್ತು ಯುವ ನಾಯಕರು, ನಮ್ಮ ಪರಿಸರ ಮತ್ತು ಭವಿಷ್ಯದ ಪೀಳಿಗೆಗೆ ಮಣ್ಣಿನ ಸಂರಕ್ಷಣೆಯ ಮಹತ್ವದ ಬಗ್ಗೆ ಚಿಂತಿಸಲು ಪ್ರೋತ್ಸಾಹಿಸುತ್ತದೆ.**


## ಏನು ಮತ್ತು ಯಾವಾಗ?

ಪ್ರತಿ ವರ್ಷ ಡಿಸೆಂಬರ್ 5 ರಂದು ವಿಶ್ವ ಮಣ್ಣು ದಿನವನ್ನು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಈ ವರ್ಷದ ಕಾರ್ಯಕ್ರಮದ ಧ್ಯೇಯವಾಕ್ಯ "ಮಣ್ಣು ಮತ್ತು ನೀರು, ಜೀವನದ ಮೂಲ" . ಈ ದಿನವು ಮಣ್ಣಿನ ಮಹತ್ವವನ್ನು ನಾವೇ ಅರ್ಥಮಾಡಿಕೊಳ್ಳಲು ಮತ್ತು ಇತರರಿಗೆ ಅದನ್ನು ವಿವರಿಸಲು ನಮಗೆ ಒಂದು ಪ್ರಮುಖ ಸಂದರ್ಭವಾಗಿದೆ. ಮಣ್ಣು ನಮ್ಮ ಗ್ರಹದ ಒಂದು ಪ್ರಮುಖ ಭಾಗವಾಗಿದೆ ಮತ್ತು ಅದರ ರಕ್ಷಣೆ ಮಾನವಕುಲಕ್ಕೆ ಅತ್ಯಂತ ಮುಖ್ಯವಾಗಿದೆ.

ಮಣ್ಣು ನಮ್ಮ ಭೂಮಿಯ ಅವಿಭಾಜ್ಯ ಅಂಗವಾಗಿದ್ದು, ಜೀವಕ್ಕೆ ಅತ್ಯಂತ ಮುಖ್ಯವಾಗಿದೆ. ಮಣ್ಣು ವನ್ಯಜೀವಿಗಳು, ಸಸ್ಯಗಳು ಮತ್ತು ಮನುಷ್ಯರಿಗೆ ಜೀವ ಉಳಿಸುವ ಮೂಲವಾಗಿದೆ. ಇದು ಸಸ್ಯಗಳ ಬೆಳವಣಿಗೆ ಮತ್ತು ಪ್ರಕೃತಿಯ ಸಮತೋಲನಕ್ಕೆ ಅಗತ್ಯವಾದ ವಿವಿಧ ಪೋಷಕಾಂಶಗಳನ್ನು ಒಳಗೊಂಡಿದೆ ಮತ್ತು ನೀರಿನ ಹರಿವು, ಪರಿಸರ ಸಮತೋಲನ ಮತ್ತು ಹವಾಮಾನ ಬದಲಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ, ವಿವಿಧ ಕಾರಣಗಳಿಗಾಗಿ ಅನೇಕ ಮಣ್ಣಿಗೆ ಸಂಬಂಧಿಸಿದ ಸಮಸ್ಯೆಗಳು ಉದ್ಭವಿಸಿವೆ. ಜನಸಂಖ್ಯಾ ಬೆಳವಣಿಗೆ, ಅನುಚಿತ ಕೃಷಿ ತಂತ್ರಗಳು ಮತ್ತು ಅನೈತಿಕ ಬಳಕೆಯಿಂದಾಗಿ ಮಣ್ಣಿನ ಗುಣಮಟ್ಟ ಕ್ಷೀಣಿಸುತ್ತಿದೆ. ಮಾನವರು ಪ್ರಕೃತಿಯ ಈ ಅಮೂಲ್ಯ ಪರಂಪರೆಯನ್ನು ಬಳಸಿಕೊಳ್ಳುತ್ತಿದ್ದಾರೆ, ಇದು ಮಣ್ಣಿನ ಫಲವತ್ತತೆಯನ್ನು ಕಡಿಮೆ ಮಾಡುವುದಲ್ಲದೆ, ಹವಾಮಾನ ಬದಲಾವಣೆ, ಅತಿಯಾದ ಮಳೆ ಮತ್ತು ಬರಗಾಲದಂತಹ ವಿವಿಧ ವಿಪತ್ತುಗಳಂತಹ ಪರಿಸರ ಸಮಸ್ಯೆಗಳನ್ನು ಉಂಟುಮಾಡುತ್ತಿದೆ. ಮಣ್ಣು ಮತ್ತು ನೀರು ಸಸ್ಯಗಳು ಬೆಳೆಯುವ ಮತ್ತು ಅಗತ್ಯ ಪೋಷಕಾಂಶಗಳನ್ನು ಪಡೆಯುವ ಮಾಧ್ಯಮವಾಗಿದೆ. ಆರೋಗ್ಯಕರ ಮಣ್ಣು ಮಣ್ಣಿನಲ್ಲಿ ಪ್ರವೇಶಿಸುವ ನೀರನ್ನು ಸ್ವಚ್ಛಗೊಳಿಸುವ ಮತ್ತು ಸಂಗ್ರಹಿಸುವ ನೈಸರ್ಗಿಕ ಫಿಲ್ಟರ್ ಆಗಿ ಪ್ರಮುಖ ಪಾತ್ರ ವಹಿಸುತ್ತದೆ. 2025 ರ ವಿಶ್ವ ಮಣ್ಣಿನ ದಿನವು ನಮ್ಮ ಕಾಲಿನ ಕೆಳಗೆ ಇರುವ ಭೂಮಿಯನ್ನು ಸಂರಕ್ಷಿಸಲು ಜಾಗತಿಕ ಕ್ರಮದ ಕರೆಯಾಗಿದೆ. ಕಲಿಯುವ ಮೂಲಕ, ಜಾಗೃತಿ ಮೂಡಿಸುವ ಮೂಲಕ ಮತ್ತು ಜವಾಬ್ದಾರಿಯುತ ಆಯ್ಕೆಗಳನ್ನು ಮಾಡುವ ಮೂಲಕ, ಮಣ್ಣಿನ ಸಂರಕ್ಷಣೆ ಮಾಡಿ ಪರಿಸರಕ್ಕೆ ಕೊಡುಗೆ ನೀಡಬಹುದು. ಮಣ್ಣು ಭೂಮಿಯ ಜೀವಾಳವಾಗಿದೆ.

## ವಿಶ್ವ ಮಣ್ಣು ದಿನದ ಇತಿಹಾಸ

ಈ ದಿನವು ಅಂತರರಾಷ್ಟ್ರೀಯ ಮಣ್ಣು ವಿಜ್ಞಾನ ಒಕ್ಕೂಟದಿಂದ ಹುಟ್ಟಿಕೊಂಡಿತು, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಅಳವಡಿಸಿಕೊಂಡ ನಂತರ 2014 ರಲ್ಲಿ ಮೊದಲ ಅಧಿಕೃತ ವಿಶ್ವ ಮಣ್ಣು ದಿನವನ್ನು ಆಚರಿಸಲಾಯಿತು. ಡಿಸೆಂಬರ್ 5 ಥೈಲ್ಯಾಂಡ್‌ನ ದಿವಂಗತ ರಾಜ ಭೂಮಿಬೋಲ್ ಅಡುಲ್ಯದೇಜ್ ಅವರ ಜನ್ಮದಿನವನ್ನು ಸ್ಮರಿಸುತ್ತದೆ.



## ಮಣ್ಣಿನ ಮಾಲಿನ್ಯಕ್ಕೆ ಕಾರಣಗಳು

- ಮಣ್ಣಿನ ಮಾಲಿನ್ಯ
- ತೀವ್ರ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕ ಬಳಕೆ
- ಭೂ ಬತ್ತಲಿಕೆಮಣ್ಣಿನ ಉಪ್ಪಾಗುವಿಕೆ
- ಮಣ್ಣು ಜಾರಿಕೆ ಮತ್ತು ಭೂಕುಸಿತ
- ನೀರಿನ ಕೊರತೆ ಮತ್ತು ತೇವ ನಷ್ಟ
- ಹವಾಮಾನ ಬದಲಾವಣೆ
- ಗಣಿಗಾರಿಕೆ
- ಅತಿಯಾದ ಮೇವುಗಾರಿಕೆ
- ಭೂ ಕುಸಿತ
- ಅರಣ್ಯ ನಾಶ
- ಪೆಟ್ರೋಲಿಯಂ ಉತ್ಪನ್ನಗಳ ಸೋರಿಕೆ
- ಅತಿ ವೃಷ್ಟಿಜಲ

## ಗ್ಲಿಂಕಾ ವಿಶ್ವ ಮಣ್ಣು ಪ್ರಶಸ್ತಿ




ಈ ಬಹುಮಾನವು ಯು.ಎಸ್.ಡಿ 15,000 ಚೆಕ್ ಮತ್ತು ಗ್ಲಿಂಕಾ ಚಿನ್ನದ ಲೇಪಿತ ಪದಕದ ರೂಪದಲ್ಲಿ ಬರುತ್ತದೆ. ರಷ್ಯಾದ ಪ್ರಸಿದ್ಧ ಮಣ್ಣು ವಿಜ್ಞಾನಿ ವ್ಯಾಸಿಲಿ ವಾಸಿಲೆವಚ್ ಗ್ಲಿಂಕಾ ಅವರನ್ನು ಮಣ್ಣು ವಿಜ್ಞಾನದ ಪಿತಾಮಹ ಎಂದು ಕರೆಯಲಾಗುತ್ತದೆ. ಮಣ್ಣು ಭೂಮಿಯ ಮೂಲ ಎಂದು ಜಗತ್ತಿಗೆ ಸಾರಿ ಹೇಳಿದರು.
ಇವರ ಕೊಡುಗೆಯನ್ನು ಸ್ಮರಿಸಿಕೊಳ್ಳಲು ಗ್ಲಿಂಕಾ ಮಣ್ಣು ಪ್ರಶಸ್ತಿಯನ್ನು ನೀಡಿ ೯ಣ್ಣು ಸಂರಕ್ಷಣೆಯಲ್ಲಿ ತಮ್ಮನ್ನು ತೊಡಗಿಸಿ ವಿಶೇಷ ಸಾಧನೆ ತೋರಿದ ನಹನಿಯರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

## ಭೂಮಿಬೋಲ್ ಪ್ರಶಸ್ತಿ



ವಿಶ್ವ ಸಂಸ್ಥೆಯ ಸಮಗ್ರ ಸಭೆಯು ವಾರ್ಷಿಕ ಕಿಂಗ್ ಭೂಮಿಬೋಲ್ ವಿಶ್ವ ಮಣ್ಣು ದಿನ ಪ್ರಶಸ್ತಿಯನ್ನು ಥೈಲ್ಯಾಂಡ್‌ನ ದಿವಂಗತ ರಾಜ ಭೂಮಿಬೋಲ್ ಅಡುಲ್ಯದೇಜ್ ಅವರ ಜನ್ಮದಿನವನ್ನು ಸ್ಮರಿಸುತ್ತದೆ.

## ಮಣ್ಣಿನ ಸಂರಕ್ಷಣೆಯ ಪರಿಹಾರ

- ಸಾವಯವ ಕೃಷಿ ಅನುಸರಿಸುವುದು
- ಮಣ್ಣು ಪರೀಕ್ಷೆ ಮಾಡುವುದು
- ಹಸಿರು ಗೊಬ್ಬರ ಬಳಕೆ
- ಮಲ್ಚಿಂಗ್ ಪದ್ಧತಿ
- ಮರಗಳು ಮತ್ತು ಸಸಿ ನೆಡುವುದು
- ಟೆರೆಸ್ ಕೃಷಿ ಮತ್ತು ಜಲ ಸಂಗ್ರಹಣೆ
- ಡ್ರಿಪ್ ಮತ್ತು ಸ್ಪ್ರಿಂಕ್ಲರ್ ನೀರಾವರಿ ವಿಧಾನ
- ಬೆಳೆ ಪರಿವರ್ತನೆ
- ಕವರ್ ಕ್ರಾಪ್ಸ್ ಬೆಳೆಸುವುದು

ಮಣ್ಣು ನಮ್ಮ ಬದುಕಿನ ಅನಿವಾರ್ಯ ಆಧಾರ. ಮಣ್ಣಿಲ್ಲದೆ ಆಹಾರವಿಲ್ಲ, ಆಹಾರವಿಲ್ಲದೆ ಬದುಕಿಲ್ಲ. ಇಂದಿನ ದಿನದಲ್ಲಿ ಮಣ್ಣಿನ ಮಾಲಿನ್ಯ, ಮಣ್ಣಿನ ಕುಸಿತ ಹಾಗೂ ಅತಿಯಾದ ರಾಸಾಯನಿಕ ಬಳಕೆಯಿಂದ ಮಣ್ಣಿನ ಆರೋಗ್ಯ ಹಾಳಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಮಣ್ಣು ದಿನಾಚರಣೆ, ಜಗತ್ತಿಗೆ ಮಣ್ಣಿನ ಮಹತ್ವದ ಕುರಿತು ತಿಳಿಸುತ್ತಿದೆ. ಹಾಗೂ ಮಣ್ಣು ಸಂರಕ್ಷಣೆಗೆ ಪ್ರೋತ್ಸಾಹಿಸುತ್ತದೆ. ಮಣ್ಣಿದ್ದರೆ ಬದುಕು, ಇಲ್ಲವಾದರೆ ಬದುಕು ಕತ್ತಲು. ಮಣ್ಣನ್ನು ಉಳಿಸುವ ಜವಾಬ್ಧಾರಿ ಕೇವಲ ವಜ್ಞಾನಿಗಳದ್ದು ಮಾತ್ರವಲ್ಲ, ಬದಲಾಗಿ ಪ್ರತಿಯೊಬ್ಬರು ಇದರ ಕುರಿತು ಖಾಳಜಿ ವಹಿಸಬೇಕು

ವಿಶ್ವದರ್ಶನ
ಡಾ. ವಿಜಯ ಸಂಕೇಶ್ವರ ಮೀಡಿಯಾ ಸ್ಕೂಲ್ ಪ್ರಾಯೋಗಿಕ ಪತ್ರಿಕೆ
06-12-2025 | ಶನಿವಾರ
ಸಂಪುಟ-3 ಸಂಚಿಕೆ- 7 ಪುಟಗಳು-4


ಅನ್ನಭಾಗ್ಯ
ಹಸಿವು ಮುಕ್ತ ಕರ್ನಾಟಕ

**ಇಂದಿರಾ ಆಹಾರ ಕಿಟ್!**

**ಅನ್ನಭಾಗ್ಯ ಯೋಜನೆಯಡಿ ವಿತರಣೆ**

# ಪಾರದರ್ಶಕತೆ ಮತ್ತು ಪೌಷ್ಟಿಕತೆಗೆ ಕರ್ನಾಟಕದ ಹೊಸ ಗುರಿ

ಕರ್ನಾಟಕ ಸರ್ಕಾರ ಘೋಷಿಸಿರುವ 'ಇಂದಿರಾ ಆಹಾರ ಕಿಟ್' ಯೋಜನೆ ಈಗ ರಾಜ್ಯದ ಮಾತುಕತೆಯ ಕೇಂದ್ರವಾಗಿದೆ. ಅನ್ನಭಾಗ್ಯ ಯೋಜನೆಯಡಿ ಸಿಗುತ್ತಿದ್ದ 5 ಕೆ.ಜಿ. ಹೆಚ್ಚುವರಿ ಅಕ್ಕಿಯ ಬದಲಿಗೆ ಪೌಷ್ಟಿಕತೆ ಒಳಗೊಂಡ ಆಹಾರ ಕಿಟ್‌ಗಳನ್ನು ನೀಡುವ ಹೊಸ ನಿರ್ಧಾರ ಸಾರ್ವಜನಿಕ ವಲಯದಲ್ಲಿ ವಿಭಿನ್ನ ಚರ್ಚೆಗಳಿಗೆ ಕಾರಣವಾಗಿದೆ. ಬಡ ಕುಟುಂಬಗಳ ಪೌಷ್ಟಿಕತೆ ಹೆಚ್ಚಿಸುವುದು, ಆಹಾರ ಸುರಕ್ಷತೆ ವೃದ್ಧಿಸುವುದು ಮತ್ತು ಪಡಿತರ ವ್ಯವಸ್ಥೆಯಲ್ಲಿ ನವೀಕರಣ ತರುವುದು–ಈ ಯೋಜನೆಯ ಮೂಲ ಉದ್ದೇಶಗಳಾಗಿವೆ. ಜನಜೀವನವನ್ನು ನೇರವಾಗಿ ಸ್ಪರ್ಶಿಸುವಂತಿರುವ ಈ ಮಹತ್ವದ ಯೋಜನೆ ನೀತಿನಿರ್ಮಾಣದಲ್ಲಿ ಹೊಸ ದಿಕ್ಕನ್ನು ತೋರಿಸಿದೆ.

ಪರಿಪೂರ್ಣ ಪಾರದರ್ಶಕತೆ ಸಾಧಿಸಲು ಸರ್ಕಾರ ಕ್ಯೂಆರ್ ಸ್ಕ್ಯಾನ್ ವ್ಯವಸ್ಥೆಯನ್ನು ಕಡ್ಡಾಯಗೊಳಿಸಿದೆ. ನ್ಯಾಯಬೆಲೆ ಅಂಗಡಿಯಲ್ಲಿ ಕಿಟ್‌ಗಳನ್ನು ನೀಡುವ ಮೊದಲು ಕಾರ್ಡ್‌ಧಾರಿಯ ವಿವರವನ್ನು ಸ್ಕ್ಯಾನ್ ಮಾಡುವ ಈ ವಿಧಾನವು ಅಕ್ರಮ ವಿತರಣೆ, ನಕಲಿ ಚೀಟಿಗಳ ಬಳಕೆ, ಮರುಮರು ವಿತರಣೆ ಮುಂತಾದ ದೀರ್ಘಕಾಲದ ಸಮಸ್ಯೆಗಳಿಗೆ ಕಡಿವಾಣ ಹಾಕಲಿದೆ. ಡಿಜಿಟಲ್ ದಾಖಲೆಗಳ ಮೂಲಕ ಯಾರು ಪಡೆದರು, ಯಾವಾಗ ಪಡೆದರು ಎಂಬ ಮಾಹಿತಿ ಸುಲಭವಾಗಿ ಲಭ್ಯವಾಗುವುದರಿಂದ ವ್ಯವಸ್ಥೆಯ ಮೇಲಿನ ನಂಬಿಕೆ ಹೆಚ್ಚುತ್ತದೆ. ಗಕಖ ಪಾವತಿಗಳಂತೆ ಪಡಿತರ ವಿತರಣೆಯೂ ತಂತ್ರಜ್ಞಾನಾಧಾರಿತವಾಗಿ ಪಾರದರ್ಶಕಗೊಳ್ಳುತ್ತಿದೆ.

ಇಂದಿರಾ ಆಹಾರ ಕಿಟ್‌ನಲ್ಲಿರುವ ತೊಗರಿ ಬೇಳೆ, ಸೂರ್ಯಕಾಂತಿ ಎಣ್ಣೆ, ಸಕ್ಕರೆ ಮತ್ತು ಉಪ್ಪು ಬಡ ಕುಟುಂಬಗಳ ಪೌಷ್ಟಿಕ ಕೊರತೆಯನ್ನು ತುಂಬುವಲ್ಲಿ ಮಹತ್ವದ್ದು. ವಿಶೇಷವಾಗಿ ತೊಗರಿ ಬೇಳೆಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ಇದು ಪ್ರೋಟೀನ್‌ಗಾಗಿ ನಂಬಿಗಸ್ತ ಮೂಲವಾಗಿದೆ. ಈ ಸಾಮಗ್ರಿಗಳು ಸಾಮಾನ್ಯ ಆಹಾರವಲ್ಲ, ಕುಟುಂಬದ ಆರೋಗ್ಯ ಸುಧಾರಿಸುವ ಸಾಮಾಜಿಕ ಹೂಡಿಕೆಯಂತಿವೆ. ಸರ್ಕಾರದ ಈ ಕ್ರಮವು ಪೌಷ್ಟಿಕ ಭಾರತದ ಕನಸಿನತ್ತ ಸಾಗುವ ಸ್ಪಷ್ಟ ಹೆಜ್ಜೆಯಾಗಿದ್ದು, ಮಕ್ಕಳು, ಮಹಿಳೆಯರು ಮತ್ತು ಹಿರಿಯರ ಆರೋಗ್ಯದ ಮೇಲಾದ ಪರಿಣಾಮ ದೀರ್ಘಕಾಲಕ್ಕೆ ಉತ್ತಮವಾಗಿರಲಿದೆ.

ರಾಜ್ಯದ 1.25 ಕೋಟಿ ಪಡಿತರ ಚೀಟಿದಾರರಿಗೆ ಈ ಕಿಟ್‌ಗಳನ್ನು ತಲುಪಿಸಲು ಸರ್ಕಾರ ತಿಂಗಳಿಗೆ 466 ಕೋಟಿ ರೂ. ವೆಚ್ಚ ಮಾಡಲಿದೆ. ಗೋದಾಮಿನಿಂದ ನ್ಯಾಯಬೆಲೆ ಅಂಗಡಿವರೆಗೆ ಕಿಟ್‌ಗಳು ಪ್ರತಿದಿನಾಂಕ 10ರೊಳಗೆ ತಲುಪಬೇಕು ಎಂಬ ನಿಯಮ ಸಮಯಪಾಲನೆಯನ್ನು ಖಚಿತಪಡಿಸುತ್ತದೆ. ಜೊತೆಗೆ ಓಂಈಇಅ, ಓಅಅಈ ಮುಂತಾದ ಸಂಸ್ಥೆಗಳ ಮೂಲಕ ಗುಣಮಟ್ಟದ ಖರೀದಿ, KTTP ನಿಯಮ ಪಾಲನೆ ಮತ್ತು ಅಳತೆಯಲ್ಲಿ ಯಾವುದೇ ತಾರತಮ್ಯ ಇರಬಾರದು ಎಂಬ ಸೂಚನೆ ಯೋಜನೆಗೆ ವಿಶ್ವಾಸಾರ್ಹತೆಯನ್ನು ನೀಡುತ್ತವೆ. ಜನರಿಂದ ಬರುವ ದೂರುಗಳಿಗೆ ಶೂನ್ಯ ಸಹನೆ ನೀತಿ ತೆಗೆದುಕೊಳ್ಳುವ ಮೂಲಕ ಸರ್ಕಾರ ಜವಾಬ್ದಾರಿತನವನ್ನು ಬಲಪಡಿಸಿದೆ.

ಈ ಯೋಜನೆಯ ನೇರ ಪರಿಣಾಮ ಹಳ್ಳಿ–ನಗರಗಳ ಎಲ್ಲಾ ಬಡ ಕುಟುಂಬಗಳ ಜೀವನದಲ್ಲಿ ಕಾಣಿಸಿಕೊಳ್ಳಲಿದೆ. ಮನೆ ಖರ್ಚು ಕಡಿಮೆಯಾಗುವುದು, ಪೌಷ್ಟಿಕ ಆಹಾರ ಲಭ್ಯವಾಗುವುದು, ಮಕ್ಕಳ ಆರೋಗ್ಯ ಸುಧಾರಣೆ, ಮಹಿಳೆಯರ ಅಡುಗೆ ಭಾರ ತಗ್ಗುವುದು ಹಾಗೂ ತಿಂಗಳ ಬಜೆಟ್‌ನ ಒತ್ತಡ ಕಡಿಮೆಯಾಗುವುದು ಇದರ ಪ್ರಮುಖ ಪ್ರಯೋಜನಗಳು. ಇಂದಿರಾ ಆಹಾರ ಕಿಟ್ ಕೇವಲ ಉಚಿತ ವಿತರಣೆ ಎಂಬ ಅರ್ಥಕ್ಕಿಂತ ಹೆಚ್ಚಿನದು; ಇದು ಪಾರದರ್ಶಕ ಆಡಳಿತ, ಆರೋಗ್ಯ ಕಾಳಜಿ ಮತ್ತು ಸಾಮಾಜಿಕ ನ್ಯಾಯದ ದಿಕ್ಕಿನಲ್ಲಿ ರಾಜ್ಯ ಸರ್ಕಾರದ ಗಂಭೀರ ಬದ್ಧತೆಯನ್ನು ತೋರಿಸುತ್ತದೆ. ಲಕ್ಷಾಂತರ ಕುಟುಂಬಗಳಿಗೆ ಇದು ನಿಜವಾದ ನೆರವು ಮತ್ತು ಭರವಸೆಯ ಯೋಜನೆಯಾಗಿ ಪರಿಣಮಿಸುವುದು ನಿಶ್ಚಿತ.

✍ಪ್ರಭು ಯಲ್ಲಪ್ಪ ವಡ್ಡರ

# ಹಿಂದೂ ಆಚರಣೆಗಳು ಮತ್ತು ವಿಜ್ಞಾನದ ನಡುವಣ ನಂಟು



ಬದುಕು ಎಂಬುದು ಸುಂದರ ಅನುಭವ.ಒಬ್ಬರ ಜೀವನ ನಡೆಸುವ ರೀತಿ ಮತ್ತು ಆಲೋಚನೆ ಅವರ ಬದುಕನ್ನು ಸಮರ್ಥಿಸುತ್ತವೆ. ಮನಸ್ಸಿನ ಅಂತರಾಳದಲ್ಲಿ ಹುದುಗಿಸಿಟ್ಟ ಅದ್ಭುತ ಶಕ್ತಿಯನ್ನು ಅರಿತವರು ಭಾರತೀಯರು.ಈ ಅದ್ಭುತ ಶಕ್ತಿಯೇ ಸನಾತನ ಧರ್ಮ. ಹಿಂದೂ ಧರ್ಮ ಎಂದು ಗುರುತಿಸಲ್ಪಟ್ಟ ಸನಾತನ ಧರ್ಮವು ಮೂಲ ತತ್ವ, ಶಾಶ್ವತ ಕರ್ಮ ಮತ್ತು ನಿಯಮಗಳನ್ನು ಸೂಚಿಸುವ ಪರಿಕಲ್ಪನೆಯಾಗಿದೆ.

ಸನಾತನ ಧರ್ಮ ಎಂಬುದು ಕೇವಲ ಭಾರತೀಯ ಹಿಂದೂಗಳು ಅಚರಿಸುತ್ತಿರುವ ಧರ್ಮ ಎಂದು ಮೇಲ್ನೋಟಕ್ಕೆ ಅನಿಸಿದರು, ವಿಶ್ವ ತಮಗೆ ಅರಿವಿಲ್ಲದಂತೆ ಪಾಲಿಸುವ ಧರ್ಮವಾಗಿದೆ.ಈ ವಿಷಯವಾಗಿ ಸನಾತನ ಧರ್ಮ ಮತ್ತು ವಿಜ್ಞಾನ ನಡುವಿನ ನಂಟನ್ನು ಅವಲೋಕಿಸಿ ನೋಡಿದರೆ ಅದರ ಸತ್ಯಾ ಸತ್ಯತೆ ಬಯಲಾಗುವುದು. ಸನಾತನ ಧರ್ಮ ವಿನ್ಯಾಸ, ಅದರಲ್ಲಿನ ಜಗತ್ತಿನ ನಿಯಮಗಳು ಮತ್ತು ದಾರ್ಶನಿಕ ರೂಪ ವಿಜ್ಞಾನದ ಪ್ರಾರಂಭ ಎಂದರೆ ತಪ್ಪಾಗದು.

ವಿಜ್ಞಾನ ಎಂದರೆ ಪರಿಸರ ನಿಯಮಾವಳಿಗಳು, ಜಂತುಗಳು ಜೀವಶಾಸ್ತ್ರ, ಮನಸ್ಸಿನ ಅಧ್ಯಯನ, ತಂತ್ರಜ್ಞಾನ ಸಂರಕ್ಷಣೆ ಈ ಮುಂತಾದ ಅಂಶಗಳು ಎಂಬ ಧೋರಣೆ ಇತ್ತು. ಭಾರತೀಯ ಆಚರಣೆಗಳನ್ನು ಪದ್ಧತಿಗಳನ್ನು ಈ ಕಾರಣದಿಂದಾಗಿ ಮೊದಲು ಕಡೆಗಣಿಸಲಾಗಿತ್ತು. ಜ್ಯೋತಿಷ್ಯ ಇದರಿಂದ ಹೊರತೆನಲ್ಲ. ಜ್ಯೋತಿಷ್ಯ ಎಂಬುದು ಮೂಢನಂಬಿಕೆ ಎಂದು ಪರಿಗಣಿಸಲಾಗಿತ್ತು. ಆದರೆ ಯಾವಾಗ ಜ್ಯೋತಿಷ್ಯ ಖಗೋಳಶಾಸ್ತ್ರದ ಆಧಾರದ ಮೇಲೆ ಗ್ರಹ ನಕ್ಷತ್ರಗಳ ಚಾಲನೆಯನ್ನು ಅಧ್ಯಯನ ಮಾಡಿ ಊಹಿಸಲಾಗುವುದೆಂದು ಅರಿತುಕೊಂಡರೋ ಅಂದು ವಿಜ್ಞಾನವು ಇದನ್ನು ನಂಬುಲಾರಂಭಿಸಿತು.

ಹಿಂದೂ ಧರ್ಮದ ನಂಬಿಕೆಗಳು ಮತ್ತು ಅತ್ಯಂತ ಪ್ರಮುಖಕರ್ಮಗಳಾದ ಸಂಸಾರ, ಕರ್ಮ, ಮೋಕ್ಷ ಚಿಂತನೆಗಳನ್ನು ತೆಗೆದುಕೊಂಡರೆ ಇಲ್ಲಿ ಆಚರಿಸಲಾಗುವ ಪ್ರತಿಯೊಂದು ಆಚರಣೆಗೂ ವೈಜ್ಞಾನಿಕ ಹಿನ್ನೆಲೆಗಳಿವೆ. ಜನರು ಇದರ ಪಾಲನೆ ನಿಯಮಿತವಾಗಿ ಯಾವುದೇ ತಪ್ಪುಗಳಿಲ್ಲದೆ ಮಾಡಿ ಇದರ ಪ್ರಯೋಜನ ಪಡೆಯಲಿ ಎಂದು ಇದನ್ನು ಸಂಪ್ರದಾಯ ಹೆಸರಿನೊಂದಿಗೆ ಜನ ಆಚರಿಸುವಂತೆ ಪ್ರೇರೇಪಿಸಲಾಯಿತು. ಪ್ರತಿಯೊಂದು ಆಚರಣೆಯು ತನ್ನದೇ ಆದ ವೈಜ್ಞಾನಿಕ ಹಿನ್ನೆಲೆಗಳನ್ನು ಅಂಶಗಳನ್ನು ಒಳಗೊಂಡಿದೆ. ಸನಾತನ ಧರ್ಮ ಕೇವಲ ಒಂದು ಸಾಂಪ್ರದಾಯವಾಗಿರದೆ, ವಿಜ್ಞಾನದ ಪ್ರಶ್ನೆಗಳನ್ನು ಉತ್ತರಿಸುವ ಗುರುವನ್ನಾಗಿಸಿದೆ.

ಈ ವಿಷಯವಾಗಿ ಕೆಲವರು ಹಿಂದೂ ಆಚರಣೆ ಮತ್ತು ಅದರ ವೈಜ್ಞಾನಿಕ ತಳಹದಿ ನೋಡುವುದಾದರೆ, ಮೊದಲನೆಯದಾಗಿ ಕರೋನ ನಂತರ ವಿಶ್ವದ ಎಲ್ಲಾ ವಿಜ್ಞಾನಿಗಳನ್ನು ತಿರುಗಿ ನೋಡುವಂತೆ ಮಾಡಿದ ಯಾಗ.ಇದನ್ನು ಹೋಮ–ಹವನ–ಯಾಗ ಎಂದು ಸಂಭೋದಿಸಲಾದರೂ ಅಗ್ನಿಗೆ ತರ್ಪಣಗಳ ಆಹುತಿ ನೀಡುತ್ತಾ ಅಗ್ನಿದೇವನ ಆರಾಧನೆ ಮಾಡುವುದೇ ಯಾಗ/ಹವನವಾಗಿದೆ. ಯಜ್ಞದಲ್ಲಿ ಉಪಯೋಗಿಸ ಲ್ಪಡುವ ತುಪ್ಪ, ಹಾಲು, ಮತ್ತು ಯಾಜ್ಞಿಯ ವಕ್ಷಗಳಾದ ಅಶ್ವಥ, ಮುತ್ತುಗ, ಅತ್ತಿ ಮುಂತಾದ ಸಮಿತ್ತುಗಳು ಔಷಧೀಯ ಗುಣವನ್ನು ಒಳಗೊಂಡಿರುವುದರಿಂದ ಯಜ್ಞದಿಂದ ಉತ್ಪತ್ತಿಯಾಗುವ ಹೊಗೆಯನ್ನು ಉಸಿರಾಡುವುದರಿಂದ ಅದರ ಔಷಧಿಗಳು ನಮ್ಮ ದೇಹವನ್ನು ಪ್ರವೇಶಿಸಿ ವೈದ್ಯಕೀಯ ಪ್ರಯೋಜನವನ್ನು ಒದಗಿಸುವುಸು. ಅಲ್ಲದೇ ವೈಜ್ಞಾನಿಕ ಅಧ್ಯಯನಗಲು ಹವನದ ಮೂಲಕ ಸೀಮಿತ ಅವಧಿಗೆ ಸೀಮಿತ ಕ್ರಿಮಿ–ಕೀಟಗಳನ್ನು ವಾತಾವರಣದಿಂದ ಶುದ್ಧ ಮಾಡುವುದೆಂದು ಸ್ಪಷ್ಟವಾಗಿ ತಿಳಿಸಿವೆ.

ಇನ್ನೂ ಅಶ್ವಥ ಮರದ ವಿಷಯಕ್ಕೆ ಬಂದರೆ, ಇದು ಸಾಮನ್ಯರಿಗೆ ಇದು ಕೇವಲ ಒಂದು ನೆರಳು ನೀಡುವ ಅಗಲ ಹರಡಿದ ಯಾವುದೇ ರುಚಿಯಾದ ಹಣ್ಣನ್ನು ನೀಡದ ಟೊಳ್ಳು ಮರದಂತೆ ಗೋಚರವಾಗಬಹುದು. ಆದರೆ ಹಿಂದೂ ಪುರಾತನ ಗ್ರಂಥಗಳಲ್ಲಿ ।ಅಶ್ವಥವೃಕ್ಷಕ್ಕೆ ವಿಶೇಷ ಸ್ಥಾನಮಾನವಿದೆ. ಇದು ಮಾನವನಿಗೆ ಅಗತ್ಯವಾದಂತಹ ಆಮ್ಲಜನಕವನ್ನು ರಾತ್ರಿ ವೇಳೆಯಲ್ಲೂ ಸಹ ನೀಡಿ ನಮ್ಮ ಪ್ರಾಣಕ್ಕೆ ಸಹಕಾರಿಯಾಗಿದೆ. ಸನಾತನ ದರ್ಮದಲ್ಲಿ ಇದನ್ನು ಹಿನ್ನಲೆಯನ್ನಾಗಿ ಇಟ್ಟುಕೊಂಡು ಇಂದಿಗೂ ಅಶ್ವಥ ಮರವನ್ನು ದೇವರಂತೆಯೇ ಕಂಡು ಪೂಜಿಸಲಾಗುತ್ತದೆ.

ಹಬ್ಬ ಹರಿದಿನ ಬಂದಂತೆ ಹಲವರು ಉಪವಾಸ ಇಟ್ಟಿರುವುದನ್ನು ನೋಡಿರಬಹುದು, ವಾರಕೊಮ್ಮೆಯಾದರು ದೇವರ ಹೆಸರಿನಲ್ಲಿ ಉಪವಾಸ ಮಾಡುವವರು ಇದ್ದಾರೆ. ಆ ಸಮಯದಲ್ಲಿ ಹಲವರು "ದೇವರೇನು ನಿಮಗೆ ಊಟ ಬಿಡಲು ಹೇಳಿದ್ದಾನೆಯೇ, ನಿಮಗೆ ಇದರಿಂದ ಯಾವುದೇ ಉಪಯೋಗವಿಲ್ಲ, ಇದು ಕೇವಲ ನಿಮ್ಮ ದೇಹವನ್ನು ದಂಡಿಸುತ್ತದೆ "ಎಂದು ಹಿಯಾಳಿಸಿದವರು ಇದ್ದಾರೆ. ಇದಕ್ಕೆ ಉತ್ತರ ಎಂಬಂತೆ ಭಾರತೀಯ ಆಯುರ್ವೇದ ತಿಳಿಸಿದೆ. ಇದರ ಪ್ರಕಾರ ದೇಹದಲ್ಲಿ ಹಲವಾರು ಕಾಯಿಲೆಗಳು ದೇಹದಲ್ಲಿ ನಿಯಮಿತ ಆಹಾರ ಸೇವನೆ ಮಾಡದೇ ಇರುವುದರಿಂದ ಬರುತ್ತದೆ. ಇದು ನಮ್ಮ ಜೀರ್ಣಾಂಗ ವ್ಯವಸ್ಥೆಯನ್ನು ಹದಗೆಡುವಂತೆ ಮಾಡಿ ದುಷ್ಪರಿಣಾಮ ಬಿರುವಂತೆ ಮಾಡುತ್ತದೆ. ಇದನ್ನು ತಡೆಯಲು ಅಥವಾ ದೇಹವನ್ನು ಸ್ವಚ್ಚಗೊಳಿಸಲು ಉಪವಾಸ ಇರಲಾಗುತ್ತದೆ. ಇದರಿಂದ ಈ ಹಿಂದೆ ಸೇವಿಸಿದ ಎಲ್ಲಾ ಆಹಾರಗಳು ಮಲ–ಮೂತ್ರಗಳ ಪ್ರಕಾರವಾಗಿ ವಿಸರ್ಜನೆಗೊಂಡು ದೇಹವನ್ನು ಮತ್ತೆ ಕಾರ್ಯಕ್ಕಾಗಿ ಸಜ್ಜಾಗುವಂತೆ ಮಾಡುತ್ತದೆ ಎಂಬುದು ಇದರ ಮೂಲ ಅಂಶವಾಗಿದೆ.

ಹೀಗೆ ಪ್ರತಿಯೊಂದು ಆಚರಣೆಯನ್ನು ಉದ್ದೇಶವನ್ನು ಮತ್ತು ಅದರ ಹಿಂದೆ ಅಡಗಿರುವ ವೈಜ್ಞಾನಿಕ ಅಂಶವನ್ನು ಬಿಡಿಸಿಡುತ್ತಾ ಹೋದರೆ ಶಬ್ದಗಳು ಸಾಲದು. ತಲೆ ಬುರುಡೆಯ ಮೇಲೆ ಜುಟ್ಟನ್ನು ಬಿಡುವುದು, ದೇವಾಲಯದ ನಿರ್ಮಾಣ–ರಚನೆ, ಪಾದ ಸ್ಪರ್ಶಿಸಿ ನಮಸ್ಕರಿಸುವುದರ ಮಹತ್ವ, ನದಿಗೆ ನಾಣ್ಯವನ್ನು ಚಿಮ್ಮುವುದು, ಯೋಗ, ಮದುವೆಯ ಸಮಯದಲ್ಲಿ ಕೈ ಮತ್ತು ಪಾದಗಳಿಗೆ ಮೆಹೆಂದಿ ಲೇಪನ ಮಾಡುವುದು, ಉತ್ತರ ದಿಕ್ಕಿಗೆ ಯಾಕೆ ತಲೆ ಮಾಡಿ ಮಲಗಬಾರದು?ಹಿಂದೂ ಸನಾತನಿ ಮಹಿಳೆಯರು ಕಾಲುಂಗುರ ಧರಿಸುವುದು, ಮನಿಕಟ್ಟಿಗೆ ಕಲಾವದಾರ ಕಟ್ಟುವುದು, ಕಾಲ್ಗೆಜ್ಜೆ ಹಾಕುವುದು ಇವು ಎಲ್ಲದರ ಹಿಂದೆ ವಿಜ್ಞಾನ ಅಡುಗಿದ್ದು ಇದು ಬರಿ ಅರ್ಥವಿಲ್ಲದ ಆಚಾರಗಳಾಗಿಲ್ಲದೆ ಇರುವುದು ವಿಶೇಷ.

✍ ವಾಣಿ ದಾಸ

**ಜನಪದ ಕಲೆಗಳು ಆರಾಧನೆ ಹಾಗೂ ಧಾರ್ಮಿಕ ಆಚರಣೆಗಳಲ್ಲಿಂದ ಹುಟ್ಟಿ, ವೃತ್ತಿ ಮತ್ತು ಮನರಂಜನೆಗಳಿಗೆ ತಲುಪಿದ ವಿವಿಧ ರೂಪಗಳಾಗಿ ಅಭಿವೃದ್ಧಿ ಹೊಂದಿವೆ. ಇವುಗಳ ಮೇಲ್ವಿಚಾರಣೆ ಮಾಡುವ ಒಂದು ವಿಂಗಡನೆ ಮಾಡುವುದು ಕಷ್ಟಕರವಾಗಿದ್ದರೂ, ಬಹುಮಟ್ಟಿನಲ್ಲಿ ಧಾರ್ಮಿಕ ಕಲೆಗಳು ಮತ್ತು ಲೌಕಿಕ ಕಲೆಗಳಾಗಿ ವಿಭಜಿಸುವ ಪ್ರಚಲಿತ ಪ್ರಯತ್ನಗಳು ಕಂಡುಬರುತ್ತವೆ.**

# ಮನುಷ್ಯನ ಸಂಸ್ಕೃತಿ ಮತ್ತು ಜನಪದ ಕಲೆಗಳ ಅವಿನಾಭಾವ ಸಂಬಂಧ

ಮನುಷ್ಯನ ಸಾಂಸ್ಕೃತಿಕ ಚರಿತ್ರೆಗು ಜನಪದ ಕಲೆಗಳ ಉಗಮಕ್ಕೂ ಅವಿನ ಭಾವ ಸಂಬಂಧವಿದೆ. ಈ ಮಾತನ್ನು ಗಮನದಲ್ಲಿರಿಸಿಕೊಂಡೆ ನಮ್ಮ ಜನಪದ ಕಲೆಗಳನ್ನು ತಿಳಿದುಕೊಳ್ಳಬೇಕು. ಅದರಲ್ಲಿ ದಕ್ಷಿಣ ಭಾರತದ ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ಜನಪದ ಕಲೆಗಳು ಹೆಚ್ಚು ವೈವಿಧ್ಯಮವಷ್ಟೇ ಅಲ್ಲ,ಸಂಖ್ಯೆಯಲ್ಲಿಯೂ ಹೆಚ್ಚಿವೆ. ಇದಕ್ಕೆ ಕಾರಣ ಕರ್ನಾಟಕದ ಸಾಂಸ್ಕೃತಿಕ ಪರಂಪರೆ ಮತ್ತು ಭೌಗೋಳಿಕ ಹಿನ್ನೆಲೆ ಎಂದರೆ ತಪ್ಪೇನಲ್ಲ.

ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಮನುಕುಲ ವಿಕಾಸವಾದಂತೆ ಕರ್ನಾಟಕ ಅನೇಕ ರೀತಿಯ ಧರ್ಮ ಪರಂಪರೆಗಳ ಹುಟ್ಟಿಗೆ ಕಾರಣವಾಗಿದೆ. ಒಟ್ಟಾರೆ ಈ ಸಾಂಸ್ಕೃತಿಕ ಇತಿಹಾಸದ ವಿವಿಧ ಘಟ್ಟಗಳಲ್ಲಿ ಅನೇಕ ಕಾರಣಗಳಿಂದಾಗಿ ಕಲೆಗಳು ಹುಟ್ಟಿಕೊಂಡವು. ಕರ್ನಾಟಕದ ವೈವಿಧ್ಯಮಯ ಭೌಗೋಳಿಕತೆಯ ಹಿನ್ನೆಲೆ ಭಿನ್ನ ರೂಪಗಳನ್ನು ಪಡೆದಿದ್ದು ಆಯಾ ಪ್ರದೇಶದ ಜನ ಸಮುದಾಯದ ಆಚರಣೆಗಳನ್ನು ಬಿಂಬಿಸುತ್ತಿವೆ.

ಬಯಲು ಸೀಮೆ, ಪಶ್ಚಿಮ ಘಟ್ಟಗಳು ಮತ್ತು ಪಶ್ಚಿಮ ಕರಾವಳಿ ಒಂದಕ್ಕಿಂತ ಒಂದು ಭಿನ್ನವಾದ ಪ್ರದೇಶ ಸ್ವರೂಪ,ವಿವಿಧ ವರ್ಣ ಮತ್ತು ವರ್ಗಗಳ ಜನ ಸಮುದಾಯ, ಹತ್ತಾರು ಧರ್ಮ ಮತ್ತು ಉಪ ಧರ್ಮ ಅನುಸರಣೆ, ಕನ್ನಡ ಮತ್ತು ಅದರ ಉಪಭಾಷೆಗಳು ಹಾಗೂ ಗಡಿ ಭಾಗಗಳ ಮರಾಠಿ, ತೆಲುಗು, ತಮಿಳು ಮಳೆಯಾಳಿ ಭಾಷಾ ಸಂಸ್ಕೃತಿಗಳ ಕೊಡುಗೆಗಳು ಮುಂತಾದ ಅನೇಕ ಅಂಶಗಳು ಈ ಜನಪದ ಕಲೆಗಳ ಸ್ವರೂಪವನ್ನು ನಿರ್ಧರಿಸುತ್ತೇವೆ.

ಆರಾಧನೆ ಮತ್ತು ಆಚರಣೆಗಳ ಕ್ರಿಯೆಗಳೇ ಕಲೆಗಳು. ಅವೇ ಮುಂದೆ ವಿಕಸನ ಹೊಂದಿ ಪೂರ್ಣ ಸ್ವರೂಪದ ಕಲೆಗಳಾದದ್ದು ಒಂದು ಬಗೆಯಾದರೆ, ಧರ್ಮ ಮತ ಪಂಥಗಳ ಪ್ರಚಾರಕ್ಕಾಗಿ ಹುಟ್ಟಿದ ಕಲೆಗಳು ಬೇರೆ. ಧರ್ಮಪಂತದ ಉದ್ದೇಶಮೀರಿ ಸಾರ್ವಜನಿಕ ಕಲೆಗಳಾಗಿ ಕಾಲ ಕಳೆಯಲು ಮಾಡಿದ ಕಲೆಗಳದ್ದು ಇನ್ನೊಂದಾದರೆ, ಕಲೆಯೇ ವೃತ್ತಿಯಾಗಿ ನಂತರ ಅದೇ ಪರಂಪರೆಯಾಗಿ ಬೆಳೆದದ್ದು ಒಂದು ಬಗೆ.ಅದರಲ್ಲಿ ವ್ಯವಸ್ಥೆಗಳನ್ನು ಪ್ರತಿಭಟಿಸಿ ಹುಟ್ಟಿಕೊಂಡ ಕಲೆಗಳನ್ನು ನಿರ್ಲಕ್ಷಿಸುವಂತಿಲ್ಲ.

ಹೀಗೆ ಹಲವು ಕುತೂಹಲಗಳನ್ನು ಕೆರಳಿಸು ಕರ್ನಾಟಕದ ಜನಪದ ಕಲೆಗಳು ನಮ್ಮ ಸಂಸ್ಕೃತಿಯ ಅಧ್ಯಯನಕ್ಕೆ ಪ್ರಧಾನ ಆಕರಗಳಾಗುತ್ತವೆ. ಇಂಥ ಕಲೆಗಳ ಶೋಧನೆಯಿಂದ ಬಹುತೇಕ ದುಡಿಯುವ ವರ್ಗದ ಜನರ ಮೌಖಿಕ ಇತಿಹಾಸವನ್ನು ನಿಜ ಸ್ವರೂಪದಲ್ಲಿ ಅರ್ಥೈಸಿಕೊಳ್ಳಲು ಸಾಧ್ಯ. ಮತ್ತಲ್ಲದೆ ಜನಪದ ಕಲೆಗಳ ಕೆಳಗೆ ಇದು ಇವರಿಂದ ರಚಿತ ಎಂಬ ಪಟ್ಟಿ ಇಲ್ಲದ ಕಾರಣ ಇದನ್ನು ಜನರು ನನ್ನದೆಂದು ಭಾವಿಸಿ ಅದನ್ನು ಸಾಲುಹುತ್ತಿರುವುದು ವಿಶೇಷ.

ಜನಪದ ಕಲೆಗಳಾಗಿರುವುದರಿಂದ ಇದಕ್ಕೆ ಪರೀದಿ ಇಲ್ಲದ ಕಾರಣ ಆರಾಧನೆ ಕಲೆಗಳಿವೆ, ಧರ್ಮಪ್ರಸಾರ ಕಲೆಗಳಿವೆ, ವೃತ್ತಿ ಗಾಯಕರ ಕಲೆಗಳಿವೆ, ಕೃಷಿಗೆ ಸಂಬಂಧಿಸಿದ ಕಲೆಗಳಿವೆ,ನೀತಿ ರೂಪದ ಕಲೆಗಳಿವೆ, ಶುದ್ಧ ಮನರಂಜನೆ ಕಲೆಗಳಿವೆ, ಹಾಗೂ ನಿಸರ್ಗದ ಕೊಡುಗೆ ಅನ್ನಬಹುದಾದ ಈ ಮೇಲಿನ ಎಲ್ಲವಕ್ಕೂ ಭಿನ್ನವಾದ ಗಿರಿ ಜನರ ಕಲೆಗಳಿವೆ. ಇಷ್ಟಲ್ಲದೆ ಕುಣಿತವೆ ಪ್ರಧಾನವಾದ,ಹಾಡೇ ಪ್ರಧಾನವಾದ, ವಾದ್ಯಗಳೆ ಮುಖ್ಯವಾದ ನಾನಾ ರೀತಿಯ ಕಲೆಗಳಿವೆ. ಯಕ್ಷಗಾನ, ತಾಳಮದ್ದಳೆ, ಬಯಲಾಟ, ಸಣ್ಣ ಆಟ, ತೊಗಲುಗೊಂಬೆ, ಸೂತ್ರದ ಗೊಂಬೆ ಮುಂತಾದ ವಿಶಿಷ್ಟ ಕಲೆಗಳು ಕರಾವಳಿಯಲ್ಲಿ ಬೇರೆಯಾಗಿ,ಮಲೆನಾಡಿನಲ್ಲಿ ಬೇರೆಯಾಗಿ, ಬಯಲು ನಾಡಿನಲ್ಲಿ ಮತ್ತು ಬೇರೆಯಾಗಿ ತುಂಬಾ ಕುತೂಹಲ ಹುಟ್ಟಿಸುತ್ತವೆ.



ಇಷ್ಟು ವೈವಿಧ್ಯಮಯ ಕಲೆಗಳ ವಿಂಗಡನೆ ಅಥವಾ ವಿಭಾಗಿಕರಣ ಅಷ್ಟುಸುಲಭದ ಮಾತೇನು ಅಲ್ಲ. ಇದೇ ನಿಖರವಾದ ವಿಂಗಡಣೆ ಎಂದು ಅಲ್ಲ. ಕರ್ನಾಟಕ ಜಾನಪದ ಅಧ್ಯಯನದಲ್ಲಿ ನೀವು ಯಾವುದೇ ಪುಸ್ತಕವನ್ನು ತೆಗೆದು ನೋಡಿದರು ಇದುವರೆಗೆ ತಮಗೆ ತೋಚಿದ ರೀತಿಯಲ್ಲಿ ಕಲೆಗಳ ವಿಂಗಡನೆ ಮಾಡಿಕೊಂದಿರುವುದನ್ನು ಕಾಣುಬಹುದು.

ಬಹುತೇಕವಾಗಿ ಧಾರ್ಮಿಕ ಕಲೆ, ಲೌಕಿಕ ಕಲೆ, ಮನರಂಜನ ಕಲೆ, ಅಲೆಮಾರಿ ಕಲೆ ಹಾಗೂ ರಂಗಭೂಮಿ ಕಲೆಗಳು ಎಂಬಂತೆ ಸರ್ವೆ ಸಾಧಾರಣ ವಿಭಾಗ ಕ್ರಮ ಚಾಲ್ತಿಯಲ್ಲಿದ್ದಂತೆ ಕಾಣುತ್ತದೆ. ಆದರೆ ಕಲೆಗಳಲ್ಲಿ ಲೌಕಿಕ ಕಲೆ, ಮನರಂಜನ ಕಲೆ, ಅಲೆಮಾರಿ ಕಲೆಗಳ ನಡುವೆ ಬೇಧ ಹುಡುಕುವುದು ಅಷ್ಟೇನು ಸರಳವಾದ ವಿಷಯವಲ್ಲ. ಕಲೆಗಳು ಜನಪದ ವಾಗಿರುವುದರಿಂದ ಅದು ಸ್ಥಳದಿಂದ ಸ್ಥಳಕ್ಕೆ ಬದಲಾಗಿ ಅದರ ರೂಪವನ್ನು ಬದಲಿಸಿಕೊಳ್ಳು ವುದರಿಂದಇದು ಕಷ್ಟ ಎನ್ನಬಹುದು.

ಇನ್ನೂ ಆರಾಧನಾ ಕಲೆಗಳ ವಿಷಯಕ್ಕೆ ಬಂದರೆ ಪ್ರಮುಖವಾಗಿ ಮಾರಿ, ಭೂತ,ನಾಗ, ವೀರಭದ್ರ, ಎಲ್ಲಮ್ಮಾ,ಮಾದೇಶ್ವರ, ಮಂಟೇಸ್ವಾಮಿ, ಮೈಲಾರಲಿಂಗ ಮುಂತಾದವುಗಳಂತೆ ದೈವಗಳ ಆರಾಧನೆ ಕ್ರಮದಲ್ಲಿ ಬರುವ ಕಲೆಗಳನ್ನು ವಿಭಾಗಿಸಲಾಗಿದೆ. ಬಹುಶಹ ಒಂದು ಕಾಲಕ್ಕೆ ಆಯಾ ದೈವಗಳ ಆರಾಧನೆ ಕ್ರಮಗಳಾಗಿ, ಕ್ರಿಯೆಗಳಾಗಿ, ಉಪಗೊಂಡು ಕಾಲ ನಂತರದಲ್ಲಿ ಕಲೆಗಳು ಸ್ವರೂಪವನ್ನು ಪಡೆದ ಅಂಶ ಇಲ್ಲಿ ಮುಖ್ಯ.ಏಕೆಂದರೆ ಈ ಆರಾಧನೆ ಕಲೆಗಳು ಅವುಗಳಷ್ಟಕ್ಕೆ ಅವು ಸ್ವತಂತ್ರವಲ್ಲ. ಏಕೆಂದರೆ ಅಲ್ಲೊಂದು ದೈವವಿರುತ್ತದೆ,ಒಂದು ಸಂದರ್ಭವಿರುತ್ತದೆ ಹಾಗೂ ಆ ಸಂದರ್ಭಕ್ಕೊಂದು ಮಹತ್ವದ ಅರ್ಥವಿರುತ್ತದೆ. ಅದಕ್ಕಾಗಿ ಇವುಗಳು ಸಹ ಜನಪದ ಕಲೆಗಳಾದರೂ ಕೂಡಾ ಇವುಗಳ ಆಚರಣೆ ಮಾಡುವಾಗ ಕಟ್ಟು ನಿಟ್ಟಾಗಿ ಇದರ ಪೂರ್ವಭಾವಿ ಕ್ರಮಗಳನ್ನು ಒಮ್ಮನಸಿನಿಂದ ಮಾಡುವುದು ಮುಖ್ಯ.

ಆದರೆ ಇಂದು ಜನಪದ ಕಲೆಗಳು ಪಿ.ಎಚ್.ಡಿ ಮಾಡಲು ಇರುವ ಒಂದು ವಿಷಯಾವಾಗಿ ಬದಲಾಗಿದೆ. ಸಿನಿಮಾ ಲೋಕ ಧಾರ್ಮಿಕ ಕಲೆಗಳನ್ನು ಬಳಸಿ ಅದರಿಂದ ಹಣಗಳಿಸುತ್ತಿವೆ. ಇಲ್ಲಿ ಹಣಗಳಿಕೆಗಾಗಿ ಕಲೆಯ ಮೊರೆ ಹೋಗಿರುವುದು ತಪ್ಪೆಂದಲ್ಲ.ಆದರೆ ಸಿನಿಮಾದಲ್ಲಿ ಕೇವಲ ಕೆಲ ಆಯ್ದ ತುಣುಕುಗಳನ್ನು ತೋರಿಸಲಾಗುತ್ತಿರುವುದರಿಂದ ಅದರ ಆಚರಣೆಗೆ ಮುನ್ನ ಮಾಡ ಬೇಕಾದ ಕಾರ್ಯಗಳ ಬಗ್ಗೆ ಪ್ರೇಕ್ಷಕರು ಅರಿಯದವರಾಗಿದ್ದಾರೆ ಮತ್ತು ಒಂದು ನಿರ್ದಿಷ್ಟ ಸಮುದಾಯ, ದರ್ಮ, ಪಂಥದವರ ಭಾವನೆಗಳಿಗೆ ದಕ್ಕೆ ತರುತ್ತಿದ್ದಾರೆ, ಆಗಬಾರದು.

ಕರ್ನಾಟಕದ ಜನಪದ ಕಲೆಗಳು ಸಾಂಸ್ಕೃತಿಕ, ಭೌಗೋಳಿಕ ವೈವಿಧ್ಯತೆಯಿಂದ ಹಾಗೂ ವಿವಿಧ ಧಾರ್ಮಿಕ, ಭಾಷಾ ಹಾಗೂ ಜನಸಮುದಾಯಗಳಿಂದ ಹುಟ್ಟಿದವು. ಇವು ಆರಾಧನೆ, ಧರ್ಮ ಪ್ರಸಾರ, ವೃತ್ತಿ, ಮನರಂಜನೆ, ಕೃಷಿ ಸಂಬಂಧಿತವಲ್ಲದೇ ನಿಸರ್ಗ ಮತ್ತು ಗಿರಿಜನರ ಕಲೆಗಳಾದ ವಿಭಿನ್ನ ರೂಪಗಳಲ್ಲಿ ಬೆಳವಣಿಗೆ ಪಡೆದಿವೆ. ಜನಪದ ಕಲೆಗಳು ಮೌಖಿಕ ಇತಿಹಾಸವಂತಾಗಿದ್ದು ಪ್ರತೀ ಸಮುದಾಯವು ತನ್ನದೇ ಆದ ಕಲೆಗೆ ಹೆಮ್ಮೆಯಿಡುತ್ತದೆ. ಕಲೆಗಳ ವಿಂಗಡನೆ ಕಷ್ಟಕರವಾಗಿದ್ದು, ಬಾರಿ ಧಾರ್ಮಿಕ ಹಾಗೂ ಲೌಕಿಕ ತತ್ವಗಳು ಮಿಶ್ರವಾಗಿವೆ. ಇವುಗಳೊಂದಿಗೆ ಸಂಬಂಧಪಟ್ಟ ನಿಖರ ಆಚರಣೆಗಳು ಮಹತ್ವಪೂರ್ಣವಾಗಿದ್ದು, ಬಂದಿದೆ ತಲೆಮಾರಿಗೆ ಪೀಠಿಕೆ ನೀಡುತ್ತದೆ. ಇದೀಗ ಈ ಕಲೆಗಳು ಅಧ್ಯಯನ ವಿಷಯವಾಗಿ ಪರಿಗಣಿಸಲ್ಪಟ್ಟರೂ, ಸಿನೆಮಾ ಮೂಲಕ ಅವುಗಳ ಅಂಶಗಳನ್ನು ಬಾಪಟ್ಟಿ ಮಾಡುತ್ತಿದ್ದು, ಸಾಮಾಜಿಕ ಭಾವನೆಗಳಿಗೆ ಹಾನಿ ಆಗುತ್ತಿರುವುದು ಗಮನಾರ್ಹ.

✍ ಕಾರ್ತಿಕ ಹಳಿಜೋಳ

ಪ್ರಧಾನ ಸಂಪಾದಕ: ಹರಿಪ್ರಕಾಶ ಕೋಣೆಮನೆ, ಸಹಾಯಕ ಸಂಪಾದಕ: ವಿನಯ ಹೆಗಡೆ, ವೆಂಕಟೇಶ ಗೇರಗದ್ದೆ, ಸ್ಫೂರ್ತಿ ಹೆಗಡೆ. ಪೂಜಾ ಹುನಕುಪ್ಪಿ, ವಿದ್ಯಾರ್ಥಿ ಸಂಪಾದಕರು: ವಾಣಿ ದಾಸ, ಕಾರ್ತಿಕ ಹಳಿಜೋಳ ಪ್ರಭು ವಡ್ಡರ, ಶರಣಬಸಪ್ಪ ಬಿರಾದಾರ ವಾಣಿ ದಾಸ, ಕಾರ್ತಿಕ ಹಳಿಜೋಳ ಪ್ರಭು ವಡ್ಡರ, ಶರಣಬಸಪ್ಪ ಬಿರಾದಾರ ವಿಳಾಸ: ವಿಶ್ವದರ್ಶನ ಶಿಕ್ಷಣ ಸಂಸ್ಥೆ ಗಣೇಶಪುರಂ, ಯಲ್ಲಾಪುರ. ಸಂಪುಟ–3 ಸಂಚಿಕೆ–7